3

# ಕೆಟ್ಟ ಸಮಯಗಳಲ್ಲಿ ಬದುಕುವದು ಹೇಗೆ

## (1 ಸಮುವೇಲ 18-23)

ಗವಿಯು ತಂಪಾಗಿಯೂ ಮತ್ತು ತೇವವಾಗಿಯೂ ಇತ್ತು. ಪಸೆಯು ಛಾವಣಿಯ ಮೇಲೆ ಕೂಡಿತ್ತು ಮತ್ತು ಗಟ್ಟಿಯಾದ ತಣ್ಣನೆಯ ನೆಲದ ಮೇಲೆ ಬೀಳುತ್ತಿತ್ತು. ದಾವೀದನು ತನ್ನ ಹೆಗೆಲ ಮೇಲೆ ಮೇಲಂಗಿಯನ್ನು ಗಟ್ಟಿಯಾಗಿ ಎಳೆದುಕೊಂಡನು ಮತ್ತು ನಡುಗುತ್ತಿದ್ದನು. ಹಸಿವೆಯಿಂದ ಹೊಟ್ಟೆಯು ಕೊರೆಯುತ್ತಿತ್ತು. ಚಳಿಯು ಅವನ ದೇಹದಲ್ಲಿರಲಿಲ್ಲ ಆದರೆ ಅವನ ಆತ್ಮದಲ್ಲಿತ್ತು; ಅವನ ಭಯಂಕರ ಹಸಿವೆಯು ಆಹಾರಕ್ಕಾಗಿರುವ ಹಸಿವೆಯಾಗಿರಲಿಲ್ಲ ಆದರೆ ಕರುಣೆ ಮತ್ತು ಕಳಕಳಿಗಾಗಿ ಇತ್ತು. ಉತ್ತಮವಾದದ್ದನ್ನು ಮಾಡುವದು ಮತ್ತು ದೇವರಲ್ಲಿ ಭರವಸೆ ಇಡುವದು ದಾವೀದನ ಒಂದೇ ಅಪರಾಧವಾಗಿತ್ತು. ಆದರೆ ಸೌಲನ ಪ್ರೀತಿಯು ಹುಚ್ಚುತನದ ಅಸೂಯೆಯಾಗಿತ್ತು. ಈಗ ದಾವೀದನು ಬೇಟೆಯಾಡಲ್ಪಟ್ಟ ಪ್ರಾಣಿಯಾಗಿದ್ದನು ಮತ್ತು ಒಬ್ಬಂಟಿಗನಾಗಿದ್ದನು.

ಕತ್ತಲಾದ, ಹಾಳು ಗವಿಯಲ್ಲಿ, ದಾವೀದನು ಹಾಡುವದಕ್ಕೆ ಪ್ರಾರಂಭಿಸಿದನು. ಅವನ ಎತ್ತರದ ಸ್ಪಷ್ಟವಾದ ಸ್ವರ, ಗಾಳಿಯಂತೆ ಮೆತ್ತಗೆ ಇದ್ದು ಭಾವನೆಗಳಿಂದ ಉನ್ಮತ್ತ ವಾಗಿತ್ತು ಮತ್ತು ಗವಿಯನ್ನು ತುಂಬಿಕೊಂಡಿತು. ತನ್ನ ಒಂಟಿತನದ, ಪ್ರಾರ್ಥನೆಗಳ ಮತ್ತು ತನ್ನ ನಂಬಿಕೆಯ ಕುರಿತು ಅವನು ಹಾಡಿದನು. ಅದುಲ್ಲಾಮ ಗವಿಯಿಂದ ಹೊರಬಿದ್ದ ಗೀತೆಯು ಇಂದು ನಮಗೆ ಕೀರ್ತನೆ 142ರಲ್ಲಿ ಸುರಕ್ಷಿತವಾಗಿಡಲ್ಪಟ್ಟಿದೆ. ಖಾಲಿಯಾಗಿರುವ ಆ ಗವಿ ಮತ್ತು ದಾವೀದನ ಹೃದಯದ ಕೂಗು ವರ್ಷಗಳು ಗತಿಸಿದರೂ ಇನ್ನೂ ಪ್ರತಿಧ್ವನಿಸುತ್ತವೆ:

> ನಾನು ಯೆಹೋವನಿಗೆ ಮೊರೆಯಿಡುವೆನು;
> ಯೆಹೋವನಿಗೆ ಕೂಗಿ ಬಿನ್ನೈಸುವೆನು.
> ನನ್ನ ಚಿಂತೆಗಳನ್ನು ಆತನ ಮುಂದೆ ಬಿಚ್ಚುವೆನು;
> ನನ್ನ ಕಷ್ಟವನ್ನು ಆತನಿಗೆ ಅರಿಕೆ ಮಾಡುವೆನು.
> ನನ್ನ ಆತ್ಮವು ಕುಂದಿಹೋಗಿದೆ; ನೀನೇ ನನ್ನ ಮಾರ್ಗವನ್ನು ಬಲ್ಲವನು;
> ನಾನು ಹೋಗಬೇಕಾದ ದಾರಿಯಲ್ಲಿ ಉರುಲನ್ನೊಡ್ಡಿದ್ದಾರೆ.
> ನನ್ನ ಬಲಗಡೆಗೆ ನೋಡಿ ಪರಾಂಬರಿಸು; ಅಲ್ಲಿ ಸಹಾಯಕರು ಯಾರೂ ಇಲ್ಲ.
> ಆಶ್ರಯವು ನಾಶವಾಯಿತು; ನನ್ನ ಪ್ರಾಣಕ್ಕೆ ಹಿತಚಿಂತಕರು ಒಬ್ಬರೂ ಇಲ್ಲ (ವಚನಗಳು 1-4).

ದಾವೀದನೊಂದಿಗೆ ನಾವು ಅನೇಕರು ನಮ್ಮನ್ನು ಗುರುತಿಸಿಕೊಳ್ಳಬಹುದು. ಕೆಟ್ಟ ದಿನಗಳು ನಿಮ್ಮ ಜೀವನದಲ್ಲಿ ಬಂದಿರಬಹುದು - ಮತ್ತು ನಿಮ್ಮನ್ನು ಯಾರೂ ಗಮನಿಸುವದಿಲ್ಲವೆಂದು ನೀವು ಆಲೋಚಿಸಬಹುದು. ಬಹುಕವಾಗಿದೆ ಅಲ್ಲವೇ?

ನಾವು ಕೇಳುವ ಪ್ರಶ್ನೆಯು, "ಕೆಟ್ಟ ಸಮಯಗಳಲ್ಲಿ *ಬದುಕುವದು* ಹೇಗೆ?" ಈ ಪಾಠದಲ್ಲಿ ನಾವು, ಅರಸನಾದ ಸೌಲನಿಂದ ತಪ್ಪಿಸಿಕೊಂಡು ದಾವೀದನು ಅಲೆದಾಡುತ್ತಿರುವದರ ಅಧ್ಯಾಯನವನ್ನು ಮುಂದುವರಿಸೋಣ. ದಾವೀದನು ಹೇಗೆ ಬದುಕಿದನು ಎಂದು ಗಮನಿಸುವಾಗ, ಬಹುಶಃ ನಾವು ಹೇಗೆ ಬದುಕಬಹುದು ಎಂದು ಕಲಿಯಬಹುದು. ಕೆಟ್ಟ ದಿನಗಳಲ್ಲಿ

ಬದುಕಲು, ಹತ್ತು "ಮಾಡಬಹುದಾದವುಗಳು" ಮತ್ತು ಹತ್ತು "ಮಾಡಬಾರದವುಗಳನ್ನು" ಗಮನಿಸೋಣ.

## I. ಕೆಟ್ಟ ದಿನಗಳು ಬರುವಾಗ ಆಶ್ಚರ್ಯ ಪಡಬೇಡಿರಿ (18:1-20:42)

ಮೊದಲನೇಯ "ಬೇಡವು" ಯಾವದೆಂದರೆ, "ಕೆಟ್ಟ ದಿನಗಳು ಬರುವಾಗ ಆಶ್ಚರ್ಯಪಡಬೇಡಿರಿ." ನಾನು ಅದನ್ನು ಸ್ವಲ್ಪ ವಿವರಿಸುತ್ತೇನೆ: "ಕೆಟ್ಟ ದಿನಗಳು ಬರುವಾಗ ಆಶ್ಚರ್ಯ ಪಡಬೇಡಿರಿ - *ನೀವು ನಿಮ್ಮ ಕಾರ್ಯವನ್ನು ಉತ್ತಮವಾಗಿ ಮಾಡುತ್ತಿರುವಾಗಲೂ.*" ಅದನ್ನು ಇನ್ನೊಮ್ಮೆ ಸ್ವಲ್ಪ ವಿವರಿಸುತ್ತೇನೆ: "ಕೆಟ್ಟ ದಿನಗಳು ಬರುವಾಗ ಆಶ್ಚರ್ಯ ಪಡಬೇಡಿರಿ, ನೀವು ನಿಮ್ಮ ಕಾರ್ಯವನ್ನು ಉತ್ತಮವಾಗಿ ಮಾಡುತ್ತಿರುವಾಗಲೂ - ಮತ್ತು *ನಿಮ್ಮ ಪ್ರತಿಯೊಂದು ಹೆಜ್ಜೆಯಲ್ಲಿಯೂ ದೇವರು ನಿಮ್ಮೊಂದಿಗಿರುವಾಗಲೂ.*"

ಈ ಹೇಳಿಕೆಯು ಕೆಲವರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡಬಹುದು. "ಒಬ್ಬನು ಉತ್ತಮವಾದ ಕೆಲಸ ಮಾಡುತ್ತಾ ದೇವರನ್ನು ಮೆಚ್ಚಿಸುತ್ತಾ ನಡೆದರೆ, ಸಹಜವಾಗಿ ಅವನಿಗೆ ಯಾವ ಕೆಟ್ಟದ್ದೂ ತಟ್ಟುವದಿಲ್ಲ!" ಎಂದು ನಾವು ಅಂದುಕೊಳ್ಳಬಹುದು. ನನ್ನ ಹೇಳಿಕೆಯು ಸರಿ ಎಂದು ನಾನಂದು ಕೊಳ್ಳುತ್ತೇನೆ. ದಾವೀದನ ಜೀವನವು ಇದು ನಿಜವೆಂದು ತೋರಿಸುತ್ತದೆ.

ನಮ್ಮ ಹಿಂದಿನ ಪಾಠದಲ್ಲಿ, ದಾವೀದನೊಂದಿಗಿನ ಯೋನಾತಾನನ ಸ್ನೇಹದ ಕುರಿತ ಭಾಗಗಳನ್ನು ಗಮನಿಸುವದಕ್ಕೆ ನಾವು ಕೆಲವು ಘಟನೆಗಳನ್ನು ಬಿಟ್ಟು ಮುಂದೆ ಸಾಗಿದೆವು. ನಾವು ಈಗ ಸ್ವಲ್ಪ ಹಿಂದೆ ಹೋಗಿ ಆ ಘಟನೆಗಳನ್ನು ಪುನಃ ಗಮನಿಸಿ, ದೇವರು ದಾವೀದನೊಂದಿಗೆ ಹೇಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಮತ್ತು ಕೆಟ್ಟ ದಿನಗಳು ಬರುವವರೆಗೆ ಇದ್ದನು ಎಂದು ನೋಡಿಕೊಳ್ಳೋಣ.

ದಾವೀದನು ಗೊಲ್ಯಾತನನ್ನು ಕೊಂದ ನಂತರ, ಅವನು ರಾಜ ಮನೆತನಕ್ಕೆ ಆಹ್ವಾನಿಸಲ್ಪಟ್ಟನು. ಸೌಲನು ಅವನ ಸಲಹೆಗಾರ ಮತ್ತು ಮಹಾ ಅಭಿಮಾನಿಯಾಗಿದ್ದನು. ಅರಸನ ಖಿನ್ನತೆಯ ತಾಸುಗಳಲ್ಲಿ ದಾವೀದನು ಅವನಿಗೋಸ್ಕರ ಹಾಡುತ್ತಿದ್ದನು. ಅವನು ಸೌಲನ ಗುರಾಣಿ ಹೊರುವವನು ಮತ್ತು ಅಂಗರಕ್ಷಕನು ಆಗಿದ್ದನು. "ದಾವೀದನು ಒಬ್ಬ ದೈತ್ಯನನ್ನು ಕೊಲ್ಲಬಹುದಾದರೆ, ಅವನು ಯಾರನ್ನಾದರೂ ಎದುರಿಸಬಲ್ಲನು!" ಎಂದು ಸೌಲನು ಆಲೋಚಿಸಿರಬಹುದು. ಸೌಲನ ಸೇನೆಯಲ್ಲಿ ದಾವೀದನು ಸೇನಾಪತಿಯಾಗಿದ್ದನು. ಅವನು ಬಹು ಪ್ರಖ್ಯಾತಿ ಹೊಂದಿದವನೂ ಮತ್ತು ಸರ್ವರಿಗೂ ಪರಿಚಯವುಳ್ಳವನೂ ಆಗಿದ್ದನು.

ನಂತರ, ಸ್ತ್ರೀಯರ ಗೀತೆಯು ಸೌಲನ ದ್ವೇಷವನ್ನು ಮೂಡಿಸಿತು: "ಸೌಲನು ಸಾವಿರಗಟ್ಟಳೆಯಾಗಿ ಕೊಂದನು; ದಾವೀದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನು" (18:7). ಸೌಲನು ವಿಷಯದಲ್ಲಿ ಯಾವ ಅಗೌರವ ಆ ಗೀತೆಯಲ್ಲಿರಲಿಲ್ಲ. "ಸಾವಿರ" ಮತ್ತು "ಹತ್ತು ಸಾವಿರ" ಎರಡೂ "ಹೆಚ್ಚಿನ ಸಂಖ್ಯೆಯನ್ನು" ಹೇಳುವ ಕವನದ ಒಂದು ಸಾಧನವಾಗಿತ್ತು. ಯೆಹೂದ್ಯರ ಕವನಗಳಲ್ಲಿನ ಸಮಾನಾಂತರದಲ್ಲಿ, ಈ ಎರಡೂ ಅತಿಶಯೋಕ್ತಿ ಸೂಚಿಸುವ ಪದಗಳು ಒಂದೆ ಅರ್ಥ ಕೊಟ್ಟಿತು.[1] ಅವನ ಹೆಸರನ್ನು ಮೊದಲು ಸೂಚಿಸುವ ಮೂಲಕ ಸೌಲನಿಗೆ ಇನ್ನೂ ಹೆಚ್ಚು ಗೌರವ ತೋರಿಸಲಾಯಿತು. ಸೌಲನು ಹೆಚ್ಚು ಪ್ರಬುದ್ಧನಾಗಿದ್ದರೆ, ಅವನು ಇದನ್ನು ತಿಳಿದುಕೊಳ್ಳುತಿದ್ದನು. ಸೌಲನು, ಪ್ರಬುದ್ಧನಾಗಲೀ ಭದ್ರನಾಗಲೀ ಇರಲಿಲ್ಲ. ಆದುದರಿಂದ ನಾವು, ಹೀಗೆ ಓದಿತ್ತೇವೆ:

> ಈ ಮಾತುಗಳ ದೆಸೆಯಿಂದ ಸೌಲನಿಗೆ ಬಹುವ್ಯಸನವೂ ಕೋಪವೂ ಉಂಟಾಗಿ ಅವನು - "ದಾವೀದನು ಹತ್ತುಸಾವಿರಗಟ್ಟಳೆಯಾಗಿ ಕೊಂದನೆಂದೂ ನಾನು ಸಾವಿರಗಟ್ಟಳೆಯಾಗಿ ಕೊಂದೆನೆಂದೂ ಹಾಡುತ್ತಾರಲ್ಲಾ! ರಾಜತ್ವದ ಹೊರತು ಅವನಿಗೆ

ಇನ್ನೇನು ಕಡಿಮೆಯಾದ ಹಾಗಾಯಿತು" ಅಂದುಕೊಂಡು ಅಂದಿನಿಂದ ಅವನ ಮೇಲೆ ಕಣ್ಣಿಟ್ಟನು (18:8, 9).

ಅರಸನು ಹುಚ್ಚನಾಗಿದ್ದನು, ವಿವರಿಸಲಾರದ ಭಯದಿಂದ ತುಂಬಿದ್ದನು (ಅಧ್ಯಾಯ 18 ರಲ್ಲಿ ಮೂರು ಬಾರಿ ಸೌಲನು ದಾವೀದನ ಕುರಿತು ಭಯಪಟ್ಟನೆಂದು ಬರೆದಿದೆ [1 ಸಮುವೇಲ 18:12, 15, 29]. ದಾವೀದನು ಅವನಿಗೋಸ್ಕರ ಕಿನ್ನರಿಯನ್ನು ಬಾರಿಸುತ್ತಿರುವಾಗ, ಎರಡು ಬಾರಿ ದಾವೀದನನ್ನು ಈಟಿಯಿಂದ ಗೋಡೆಗೆ ತಿವಿಯಲು ಪ್ರಯತ್ನಿಸಿದನು. ದಾವೀದನನ್ನು ಸನ್ಮಾನಿಸುವ ನೆಪದಲ್ಲಿ ಸೇನೆಯಲ್ಲಿ ಮೇಲಿನ ಸ್ಥಾನಕ್ಕೆ ತಂದನು, ಆದರೆ ಅವನು ಯುದ್ಧದಲ್ಲಿ ಸಾಯಬೇಕೆಂಬ ನಿರೀಕ್ಷೆ ಅವನಿಗಿತ್ತು (1 ಸಮುವೇಲ 18:17).

ಗೊಲ್ಯಾತನನ್ನು ಕೊಂದವನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವದಾಗಿ ಮಾಡಿದ ವಾಗ್ದಾನದ ಕುರಿತು ಸೌಲನು ಅನೇಕ ಕುತಂತ್ರಗಳನ್ನು ಯೋಜಿಸಿದನು (1 ಸಮುವೇಲ 17:25). ಅವನು ಮೊದಲು ತನ್ನ ಹಿರಿಯ ಮಗಳು, ಮೇರಬಳನ್ನು ದಾವೀದನಿಗೆ ಕೊಟ್ಟನು. ಆ ಕೊಡುಗೆಗೆ ತಾನು ಅರ್ಹನಲ್ಲವೆಂದು ದಾವೀದನು ನಯವಾಗಿ ಹೇಳಿದಾಗ, ಸೌಲನು ಮೇರಬಳನ್ನು ಇನ್ನೊಬ್ಬನಿಗೆ ಕೊಟ್ಟನು.[2] ತನ್ನ ಚಿಕ್ಕ ಮಗಳು ಮೀಕಲಳು ದಾವೀದನನ್ನು ಪ್ರೀತಿಸುತ್ತಿದ್ದಾಳೆಂದು ತಿಳಿದ ಸೌಲನು, "ಅವನಿಗೆ ಉರಲಾಗಿರುವಂತೆಯೂ ಅವನು ಫಿಲಿಷ್ಟಿಯರ ಕೈಗೆ ಸಿಕ್ಕಿಬೀಳುವಂತೆಯೂ ಇವಳನ್ನು ಅವನಿಗೆ ಕೊಡುವೆನು" ಅಂದುಕೊಂಡನು (1 ಸಮುವೇಲ 18:21). "ಉರುಲು" ಎಂಬ ಪದವು ಗಾಳಕ್ಕೆ ಸಿಕ್ಕಿಸುವ ವಸ್ತುವಿರುವ ಬೋನು ಸಿಡಿಯುವದನ್ನು, ಇಬ್ರಿಯ ಪದ ಸೂಚಿಸುತ್ತದೆ. ಮೀಕಲಳು ಸೌಲನ ಇಲಿಬಲಿಯಲ್ಲಿನ ಚೀಸ್ ಆಗಿದ್ದಳು!

ಸೌಲನು ಮೀಕಲಳನ್ನು ದಾವೀದನಿಗೆ ಕೊಟ್ಟಾಗ, ಅವನು, "ನಾನು ದರಿದ್ರನು" ಎಂದು ಉತ್ತರಕೊಟ್ಟನು (18:23). ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವನಿಗೆ ಮದಲಗಿತ್ತಿಯ ಬೆಲೆಯನ್ನು ಕೊಡಲಾಗುವದಿಲ್ಲವೆಂದು ಸೂಚಿಸಿದಂತೆ (ಆದಿಕಾಂಡ 34:12; ವಿಮೋಚನಕಾಂಡ 22:16). ದಾವೀದನು ಗೊಲ್ಯಾತನನ್ನು ಕೊಂದದ್ದರಿಂದ, ಸೌಲನು ದಾವೀದನನ್ನು ಐಶ್ವರ್ಯವಂತನನ್ನಾಗಿಸಬಹುದಿತ್ತು ಮತ್ತು ತನ್ನ ಒಬ್ಬ ಮಗಳನ್ನು ಯಾವ ಮದಲಗಿತ್ತಿಯ ಬೆಲೆಯಿಲ್ಲದೇ ಕೊಡಬಹುದಿತ್ತು (1 ಸಮುವೇಲ 17:25) - ಆದರೆ ಸೌಲನು ತನ್ನ ಮಾತನ್ನು ಉಳಿಸಿಕೊಳ್ಳಲಿಲ್ಲ. ಈಗ ಸೌಲನು, "ನನಗೆ ಯಾವ ಹಣ ಬೇಡ. ನೀನು ಒಂದು ನೂರು ಫಿಲಿಷ್ಟಿಯರನ್ನು ಕೊಂದದ್ದರ ಪುರಾವೆ ಬೇಕು"[3] ಅಂದನು. ದಾವೀದನು ಈ ಕಾರ್ಯದಲ್ಲಿ ಕೊಲ್ಲಲ್ಪಡುವನು ಎಂದು ಸೌಲನು ನೆನೆಸಿದನು. ದಾವೀದನ ಛಲ ಸಾಧಿಸುವ ಮನಸ್ಸಿಗೆ ಈ ಕೊಡುಗೆ ಹಿಡಿಸಿತು. ಅವನು ಮತ್ತು ಅವನ ಜನರು ಫಿಲಿಷ್ಟಿಯರ ಮೇಲೆ ದಾಳಿ ಮಾಡಿ, ನೂರಲ್ಲ, ಇನ್ನೂರು ಪುರಾವೆಗಳನ್ನು ತಂದರು. ಮೀಕಲಳನ್ನು ದಾವೀದನಿಗೆ ಕೊಡುವದನ್ನು ಬಿಟ್ಟರೆ ಬೇರೆ ಮಾರ್ಗ ಸೌಲನಿಗಿರಲಿಲ್ಲ.

ಸೌಲನ ಉದ್ವಿಗ್ನತೆಯ ಏಕರೂಪವಾಗಿ ಹೆಚ್ಚುತ್ತಾಹೋಯಿತ್ತು. ಮೊದಲು ಯೋನಾತಾನನು ದಾವೀದನ ಪಕ್ಷವಹಿಸಿದನು; ಈಗ ಮೀಕಲಳೂ ಅವನ ಪಕ್ಷದಲ್ಲಿದ್ದಳು! ಸೌಲನು ಹುಚ್ಚು ಕಣ್ಣುಗಳಲ್ಲಿ, ದಾವೀದನು ತನ್ನ ಮಕ್ಕಳನ್ನು ತನ್ನ ವಿರುದ್ಧ ತಿರುಗಿ ಬೀಳುವಂತೆ ಮಾಡಿದನು. ಸೌಲನು ಸ್ವೀಕರಿಸುವದಕ್ಕಿಂತ ಇದು ಹೆಚ್ಚನದಾಗಿತ್ತು. "ಸೌಲನು ತಿಳಿದು ಅವನಿಗೆ ಮತ್ತಷ್ಟು ಹೆದರುವವನಾಗಿ ಅವನ ನಿತ್ಯವೈರಿಯಾದನು" (18:29). NIVಯಲ್ಲಿ ಹೀಗಿದೆ, "ಅವನ ಜೀವನ ಪರ್ಯಂತ ದಾವೀದನ ವೈರಿಯಾಗಿ ಉಳಿದನು." ನೀವು ಸಾಯಬೇಕೆಂದು ಬಯಸುವ ಮಾವ ನಿಮಗಿರುವುದಾದರೆ ಎಂದು ಕಲ್ಪಿಸಿದ್ದೀರಾ? (ನಿಮ್ಮಲ್ಲಿ ಕೆಲವರು ಯಾಕೆ ತಲೆ ತೂಗುತ್ತಿದ್ದೀರಿ?)

ನಮ್ಮ ಹಿಂದಿನ ಪಾಠದಲ್ಲಿ ನಾವು ಗಮನಿಸಿದಂತೆ ಯೋನಾತಾನನಿಗೆ ಮತ್ತು ಅವನ

ಅಧಿಕಾರಿಗಳಿಗೆ ದಾವೀದನನ್ನು ಕೊಲ್ಲಲು ಆಜ್ಞೆ ಕೊಟ್ಟಿದ್ದನು, ಆದರೆ ಯೋನಾತಾನನು ತನ್ನ ಮಿತ್ರನ ಪರವಾಗಿ ಬೇಡಿಕೊಂಡನು ಮತ್ತು ಸ್ವಲ್ಪ ಸಮಯ ದಾವೀದನನ್ನು ಮುಗಿಸುವ ಸೌಲನ ಪ್ರಯತ್ನದಲ್ಲಿ ಬಿಡುವು ದೊರೆಯಿತು. ದಾವೀದನನ್ನು ಕೊಲ್ಲುವದಿಲ್ಲವೆಂಬ ವಾಗ್ದಾನವನ್ನು ಸೌಲನು ಬಹು ಬೇಗನೆ ಮರೆತು ಬಿಟ್ಟನು ಮತ್ತು ದಾವೀದನೆಡೆಗೆ ತನ್ನ ಈಟಿಯನ್ನು ಎಸೆದನು. 1 ಸಮುವೇಲ 19:10 ಹೀಗೆ ಹೇಳುತ್ತದೆ, "ದಾವೀದನು ಆ ರಾತ್ರಿಯಲ್ಲೇ ತಪ್ಪಿಸಿಕೊಂಡು ಓಡಿಹೋದನು." "ಓಡಿಹೋಗುವದು" ಮತ್ತು "ತಪ್ಪಿಸಿಕೊಳ್ಳುವದು," ದಾವೀದನ ಜೀವನದ ಮುಂದಿನ ಸುಮಾರು ಹತ್ತು ವರ್ಷಗಳನ್ನು ಸಂಕ್ಷಿಪ್ತವಾಗಿ ಹೇಳುತ್ತದೆ; ಈ ಪದಗಳನ್ನು ನಿಮ್ಮ ವಾಕ್ಯ ಭಾಗದಲ್ಲಿ ಪದೇ ಪದೇ ಕಾಣುತ್ತೀರಿ.[4] ದಾವೀದನು ಉತ್ತಮವಾ ದದ್ದನ್ನೇ ಮಾಡುತ್ತೀದ್ದನು; ಅವನು ದೇವರಿಂದ ಆಶೀರ್ವದಿಸಲ್ಪಟ್ಟನು; ಆದರೂ ಕೆಟ್ಟ ದಿನಗಳು ಬಂದವು.

ದಾವೀದನು ಮೊದಲು ತನ್ನ ಮನೆಗೆ ಓಡಿ ಹೋದನು ಮತ್ತು ತನ್ನ ಪತ್ನಿಯಾದ ಮೀಕಲಳಿಗೆ ಏನಾಯಿತೆಂದು ತಿಳಿಸಿದನು.[5] ದಾವೀದನಿಗಿಂತ ತನ್ನ ತಂದೆಯನ್ನು ಚೆನ್ನಾಗಿ ಬಲ್ಲವಳಾದ ಅವಳು, ತನ್ನ ಮನೆಯನ್ನು ಗಮನಿಸುತ್ತಿದ್ದಾರೆ ಎಂದು ತಿಳಿದು,[6] ಮೀಕಲಳು ದಾವೀದನನ್ನು ಒಂದು ಕಿಟಕಿಯಿಂದ ಇಳಿ ಬಿಟ್ಟಳು.[7] ದಾವೀದನು ಇನ್ನೆಂದೂ ತನ್ನ ಮನೆಗೆ ಅಥವಾ ಮೀಕಲಳ ಪ್ರೀತಿಗೆ ಹಿಂತಿರುಗಲಾಗಲಿಲ್ಲ. ಕೆಟ್ಟ ಸಮಯಗಳು ಇನ್ನೂ ಭಯಂಕರ ವಾದವು.

ದಾವೀದನಿಗೆ ಸಮಯ ದೊರೆಯಬೇಕೆಂದು, ತನ್ನ ಹಾಸಿಗೆಯ ಮೇಲೆ ಮೀಕಲಳು ಒಂದು ಗೊಂಬೆಯನ್ನು ಹಾಕಿದಳು,[8] ಅದರ ತಲೆಯ ಮೇಲೆ ಮೇಕೆಯ ಕೂದಲನ್ನು ಹೊದಿಸಿದಳು ಮತ್ತು ಬಟ್ಟೆಯಿಂದ ಮುಚ್ಚಿದಳು. ಸೌಲನ ಜನರಿಗೆ ದಾವೀದನು ಅಸ್ವಸ್ತನಾಗಿದ್ದಾನೆಂದು ಹೇಳಿದಳು. ಅವಳ ಮೋಸವು ತಿಳಿದುಬರುವಷ್ಟರಲ್ಲಿ ದಾವೀದನು ರಾಮದಲ್ಲಿ ವಾಸಿಸುತ್ತಿದ್ದ ಮುದಿ ಪ್ರವಾದಿಯಾದ ಸಮುವೇಲನ ಬಳಿಗೆ ತಲುಪಿದ್ದನು. ಸಮುವೇಲನು ದಾವೀದನನ್ನು ನಾಯೋತಿಗೆ ಕರಕೊಂಡು ಹೋದನು.[9] ಅದು ಪ್ರವಾದಿಗಳ ಪಟ್ಟಣವಾಗಿತ್ತು, ದಾವೀದನು ಅಲ್ಲಿ ರಕ್ಷೆಯನ್ನು ಪಡೆದನು. ದಾವೀದನು ಅಲ್ಲಿದ್ದಾನೆಂದು ಸೌಲನಿಗೆ ತಿಳಿದಾಗ, ಅವನನ್ನು ಕೊಲ್ಲುವದಕ್ಕೆ ಬೇರೆ ಆಳುಗಳನ್ನು ಕಳುಹಿಸಿದನು, ಆದರೆ ದೇವರು ಅವನನ್ನು ರಕ್ಷಿಸಿದನು. ಸೌಲನ ಆಳುಗಳು ಪ್ರವಾದಿಗಳ ಮೇಲೆ ದಾಳಿ ಮಾಡಿದಾಗ, ದೇವರು ತನ್ನ ಆತ್ಮವನ್ನು ಅವರ ಮೇಲೆ ಕಳುಹಿಸಿದನು ಮತ್ತು ಅವರು ಪ್ರವಾದಿಸತೊಡಗಿದರು. ಸೌಲನು ಇನ್ನೂ ಎರಡು ಗುಂಪುಗಳನ್ನು ಕಳುಹಿಸಿದನು - ಅದೇ ಪರಿಣಾಮವಿತ್ತು.

ನಾವು ಇಲ್ಲಿ ಸ್ವಲ್ಪ ಹಾಸ್ಯವನ್ನು ಈ ಘಟನೆಯಲ್ಲಿ ಕಾಣುತ್ತೇವೆ. ಒಂದು ಡಜನ್ ಕೊಲೆಗಡುಕರು ತಮ್ಮ ಚರ್ಮದ ಹೊರ ಅಂಗಿಯನ್ನು ಧರಿಸಿ, ತಾಮ್ರದ ಬೆರಳುಕಣ್ಣಿಯನ್ನು ಹಾಕಿಕೊಂಡು ಮತ್ತು ಸೈಕಲ್ ಸರಳಿಯನ್ನು ಹಿಡಿದುಕೊಂಡು, ಆರಾಧನೆಯ ಸಮಯದಲ್ಲಿ ದಾಳಿಮಾಡಿ, ಬೋಧಕರನ್ನು ಕೊಲ್ಲಲು ಯೋಜಿಸುವದಕ್ಕೆ ಹೋಲಿಸಬಹುದು. ನಂತರ - ಪೌ - ಒಂದು ವಿಚಿತ್ರವಾದ ನೋಟವು ಅವರ ಮೋರೆಯ ಮೇಲೆ ಕಂಡುಬರುತ್ತದೆ ಮತ್ತು ಅವರು ಒಂದು ಹಾಡಿನ ಪುಸ್ತಕವನ್ನು ತೆಗೆದುಕೊಂಡು ಗಟ್ಟಿಯಾದ ಸ್ವರದಲ್ಲಿ "ಅದ್ಭುತ ವಾದ ಕೃಪೆ" ಎಂಬ ರಾಗವನ್ನು ಹಾಡುವದಕ್ಕೆ ಪ್ರಾರಂಭಿಸುತ್ತಾರೆ.

ಸೌಲನಿಗೆ ಏನಾಯಿತ್ತೆಂದು ತಿಳಿಯುವದಿಲ್ಲ. ಆದುದರಿಂದ ಅವನು ಅದನ್ನು ತನಿಖೆ ಮಾಡಲು ಬರುತ್ತಾನೆ. ಅವನು ಪ್ರವಾ ದಿಗಳನ್ನು ತಲುಪಿದಾಗ, ದೇವರು ತನ್ನ ಆತ್ಮವನ್ನು ಕಳುಹಿಸುವ ಮೂಲಕ, ಸೌಲನನ್ನು ಅಸಹಾಯಕನನ್ನಾಗಿ ಮಾಡಿದನು. ಸೌಲನು ಬೆತ್ತಲೆಯಾಗಿ ನೆಲದ ಮೇಲೆ ಹಗಲು ರಾತ್ರಿ, ಪ್ರವಾದಿಸುತ್ತಾ ಬಿದ್ದಿರುವ ಮೋಜಿನ ಘಟನೆಯಿಂದ ಈ ಅಧ್ಯಾಯವು ಅಂತ್ಯವಾಗುತ್ತದೆ (19:24)![10] ರಾಮವೂ ಸುರಕ್ಷಿತವಾಗಿಲ್ಲವೆಂದು ಸ್ಪಷ್ಟವಾಯಿತ್ತು. ಮತ್ತೊಮ್ಮೆ ದಾವೀದನು ಓಡಿ ಹೋಗಬೇಕಾಯಿತು. ಇನ್ನೆಂದೂ ಅವನು ತನ್ನ ಸಲಹೆಗಾರ ಸಮುವೇಲನನ್ನು ನೋಡ ಲಾಗಲಿಲ್ಲ. ಕೆಟ್ಟ ದಿನಗಳು ಇನ್ನೂ ಭಯಂಕರ

ವಾದವು.

ಹಿಂದಿನ ಪಾಠದಲ್ಲಿ ನಾವು ನೋಡಿದಂತೆ, ದಾವೀದನು ನಂತರ ಯೋನಾತಾನನ ಬಳಿಗೆ ಓಡಿ ಹೋದನು. ತನ್ನ ಮಿತ್ರ ಎದುರು ಕೂಗಿಕೊಳ್ಳುವಾಗಿನ ಆತಂಕವನ್ನು ಕಲ್ಪಿಸಿರಿ, "ನಾನೇನು ಮಾಡಿದೆನು? ನನ್ನ ಅಪರಾಧವೇನು?" (20:1). ಕೆಟ್ಟ ಸಮಯಗಳು ಬಂದಾಗ ಬಹುಶಃ ನೀವೂ ಕೂಡ, "ಇದನ್ನು ಪಡೆಯಲು ನಾನೇನು ಮಾಡಿದ್ದೇನೆ? ಎಂದು ಕೂಗಿರಬಹುದು." ಸೌಲ ದ್ವೇಷವನ್ನು ಹೊಂದಲು ದಾವೀದನು ಏನನ್ನೂ ಮಾಡಿರಲಿಲ್ಲವೆಂಬುದು ಮುಖ್ಯ ಅಂಶ ವಾಗಿದೆ ಆಗಲೂ ಕೆಟ್ಟ ಸಮಯಗಳು ಬಂದವು.

ಸೌಲನು ಯೋನಾತಾನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದಾಗ ಯಾವ ಸಂಶಯವೂ ಉಳಿಯಲಿಲ್ಲ. ದಾವೀದನು ಬದುಕಿರುವಷ್ಟು ಕಾಲ ಸೌಲನು ವಿಶ್ರಮಿಸಿಕೊಳ್ಳಲು ಸಾಧ್ಯವಿರಲಿಲ್ಲ. ಇಬ್ಬರೂ ಮಿತ್ರರು ಕಣ್ಣೀರಿನಿಂದ ಅಗಲಿದರು. ಕೆಟ್ಟ ದಿನಗಳು ಇನ್ನೂ ಕೆಟ್ಟದಾದವು.

ನಾನು ಮತ್ತೊಮ್ಮೆ ಒತ್ತಿ ಹೇಳುತ್ತೇನೆ, (1) ದಾವೀದನು ಉತ್ತಮವಾದದ್ದನ್ನೇ ಮಾಡುತ್ತಿದ್ದನು - ದೈಹಿಕವಾಗಿ ಮತ್ತು ಆತ್ಮಿಕವಾಗಿ - ಮತ್ತು (2) ಅವನು ಮಾಡಿದ ಎಲ್ಲಾದರಲ್ಲಿಯೂ ದೇವರು ಅವನೊಂದಿಗೆ ಇದ್ದನು. ಆದಾಗ್ಯೂ ಕೆಟ್ಟ ಸಮಯಗಳು ಬಂದವು. ಇದು ದೇವರ ಹೃದಯಕ್ಕೆ ಒಪ್ಪುವ ಮನುಷ್ಯನಿಗಾದರೆ, ನಿನಗೂ ಆಗಬಹುದು. ನೀನು ಒಬ್ಬ ಹಿರಿಯನಾಗಿರಬಹುದು, ಒಬ್ಬ ಸಭಾಪಾಲಕನಾಗಿರಬಹುದು, ಒಬ್ಬ ಬೋಧಕನಾಗಿರಬಹುದು ಅಥವಾ ಬೈಬಲ್ ಪಾಠ ಶಾಲೆಯ ಶಿಕ್ಷಕನಾಗಿರಬಹುದು - ಮತ್ತು ನಿಮ್ಮ ಮಕ್ಕಳು ಮಾದಕ ವಸ್ತು ಸೇವಿಸುತ್ತಿರಬಹುದು ಮತ್ತು ನಿಮ್ಮ ಹೃದಯವನ್ನು ಮುರಿಯಬಹುದು. ನೀವು ಒಬ್ಬ ಪ್ರೀತಿಯ ಪತ್ನಿ ಅಥವಾ ಪತಿಯಾಗಿರಬಹುದು, ನಿಮ್ಮ ದಾಂಪತ್ಯ ಜೀವನ ಸರಿಯಾದ ಮಾರ್ಗದಲ್ಲಿ ನಡೆಯುವಂತೆ ನೀವು ಏನೆಲ್ಲಾ ಮಾಡುತ್ತಿರಬಹುದು ಆಗ ನಿಮ್ಮ ಸಂಗಾತಿ ಇನ್ನೊಬ್ಬರಿಗಾಗಿ ನಿಮ್ಮನ್ನು ಬಿಟ್ಟು ಹೋಗಬಹುದು. ನೀವು ಒಬ್ಬ ಯಥಾರ್ಥವಾದ ಕ್ರೈಸ್ತ ಉದ್ಯಮಿಯಾಗಿರಬಹುದು, ನಿಮ್ಮ ಉದ್ಯಮವು ಯಶಸ್ವಿಯಾಗುವಂತೆ ನೀವು ಉತ್ತಮ ಪ್ರಯತ್ನ ಮಾಡಿರಬಹುದು ಆಗ ನೀವು ಎಲ್ಲವನ್ನೂ ಕಳಕೊಳ್ಳುತ್ತೀರಿ. ನೀವು ಒಬ್ಬ ನಂಬಿಗಸ್ತ ಕ್ರೈಸ್ತನಾಗಿರಬಹುದು, ದೇವರ ಸೇವೆಯಲ್ಲಿ ನಿಮ್ಮ ಹೃದಯ ಮತ್ತು ಆತ್ಮವನ್ನು ಹಾಕಿರಬಹುದು ಆಗ ವೈದ್ಯರು ನಿಮಗೆ, "ಬದುಕಲು ನಿಮಗೆ ಕೇವಲ ಮೂರು ತಿಂಗಳುಗಳಿವೆ" ಎಂದು ಹೇಳು ತ್ತಾರೆ.

ನನ್ನನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬೇಡಿರಿ. ನಂಬಿಗಸ್ತ ಕ್ರೈಸ್ತರಾಗಿರುವಾಗ ಉತ್ತಮ ದಾಂಪತ್ಯ ಜೀವನವನ್ನು, ಸಂತೋಷದಿಂದ ತುಂಬಿದ ಮನೆಗಳು ಮತ್ತು ಆರ್ಥಿಕ ಸ್ಥಿರತೆ ಮತ್ತು ಉತ್ತಮ ಆರೋಗ್ಯ ಹೊಂದುವ ಅವಕಾಶಗಳು ಇನ್ನೂ ಉತ್ತಮವಾಗುತ್ತವೆ. ದೇವರ ನಂಬಿಗಸ್ತ ಮಕ್ಕಳೂ ಕೆಟ್ಟ ಸಮಯಗಳಿಂದ ಹೊರತಾಗಿಲ್ಲವೆಂದು ನಾವು ತಿಳುಕೊಳ್ಳಬೇಕು. ಕೆಟ್ಟ ದಿನಗಳು ಬರುವಾಗ ಆಶ್ಚರ್ಯ ಪಡಬೇಡಿರಿ.

## II. ನೀವು ಮೊದಲ ಬಾರಿಗೆ ಮೂರ್ಖತನದಿಂದ ನಡಕೊಂಡರೆ ಆಶ್ಚರ್ಯಪಡಬೇಡಿರಿ (21:1-22:1)

ಈ ಪ್ರಶ್ನೆಯ ಕುರಿತು ಒಂದು ಗಳಿಗೆ ಆಲೋಚನೆ ಮಾಡಿರಿ: ದಾವೀದನು ಯಾಕೆ ಓಡಿಹೋದನು? ಅವನು ಸಿಂಹ ಮತ್ತು ಕರಡಿಯನ್ನು ಎದುರಿಸಿದನು. ಅವನು ಗೊಲ್ಯಾತನನ್ನು ಎದುರಿಸಿದನು. ಅವನು ಫಿಲಿಷ್ಟಿರ ವಿರುದ್ಧ ಅನೇಕ ಯುದ್ಧಗಳನ್ನು ಗೆದ್ದಿದನು; ಅವನೊಬ್ಬ ಯುದ್ಧವೀರನಾಗಿದ್ದನು. ಹಾಗಾದರೆ ಅವನು ತನ್ನ ಜೀವಕ್ಕಾಗಿ ಓಡಿಹೋಗುವದರ ಬದಲು ಸೌಲನ ವಿರುದ್ಧ ಎದುರು ಯಾಕೆ ಬೀಳಲಿಲ್ಲ? ತನ್ನ ಜೀವನದಲ್ಲಿ ಮೊದಲಬಾರಿಗೆ, ಇಂಥ ಪರಿಸ್ಥಿಯನ್ನು ಹೇಗೆ ಎದುರಿಸಬೇಕೆಂದು ಅವನಿಗೆ ತಿಳಿಯಲಿಲ್ಲವೆಂದು ನಾನು ಸೂಚಿಸು

ತ್ತೇನೆ. ಇಲ್ಲಿಯವರೆಗೆ, ವಿರೋಧವನ್ನು ಅವನು ಎದುರಿಸುವ ರೀತಿಯು ವಿರೋಧಿಯನ್ನು ಕೊಲ್ಲುವದಾಗಿತ್ತು. ಅವನು ಸಿಂಹ ಮತ್ತು ಕರಡಿಯನ್ನು ಕೊಂದನು. ಅವನು ಗೊಲ್ಯಾತನನ್ನು ಕೊಂದನು. ಅವನು ಫಿಲಿಷ್ಟಿಯರನ್ನು ಕೊಂದನು. ಸೌಲನಾದರೂ ಹೇಗೂ ದೇವರಿಂದ ಅಭಿಷಿಕ್ತನಾದ ಅರಸನಾಗಿದ್ದನು. ದಾವೀದನು ಯೆಹೋವನ ಅಭಿಷಿಕ್ತನನ್ನು ಕೊಲ್ಲುವದು ಅಸಾಧ್ಯವಾಗಿತ್ತು (1 ಸಮುವೇಲ 24:6; ಇತ್ಯಾದಿ). ದಾವೀದನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ, ಆದುದರಿಂದ ಅವನು ಓಡಿಹೋದನು.

ದಾವೀದನು ತನ್ನ ಜೀವನವನ್ನು ಒಬ್ಬ ದೇಶಭ್ರಷ್ಟನಂತೆ ಪ್ರಾರಂಭಿಸಿದಾಗ, ಅವನು ಹತಾಶನಾಗಿ ಓಡಿದನು, ಯಾವ ಯೋಜನೆ ಅಥವಾ ಉದ್ದೇಶವಿಲ್ಲದೇ ಕೆಲವು ಮೂರ್ಖತನದ ಕೆಲಸಗಳನ್ನೂ ಮಾಡಿದನು ಎನ್ನುವ ಸಂಗತಿಯು ಬಹು ಪ್ರಾಮುಖ್ಯವಾಗಿದೆ.

ಅವನು ದಕ್ಷಿಣಕ್ಕೆ ಎರಡು ಮೈಲು ದೂರದಲ್ಲಿರುವ ನೋಬದ ಕಡೆಗೆ ಹೋದನು. ಶಿಲೋವಿ ನಲ್ಲಿ ನಾಶವಾದ ತರುವಾಯ, ದೇವದರ್ಶನದ ಗುಡಾರವು ಅಲ್ಲಿ ಪುನಃ ಸ್ಥಾಪಿಸಲ್ಪಟ್ಟಿತ್ತು (1 ಸಮುವೇಲ 4:2, 3; ಯೆರೆಮೀಯ 7:12); ಅದು ಯಾಜಕರು ಮತ್ತು ಅವರ ಕುಟುಂಬಗಳ ಪಟ್ಟಣವಾಗಿತ್ತು. ದಾವೀದನು ಆಹಾರ ಮತ್ತು ಆಯುಧಗಳಿಲ್ಲದೇ ಇದ್ದನು ಮತ್ತು ಅವನು ಹೀಗೆ ಆಲೋಚಿಸಿರಬಹುದು, "ಯಾಜಕರು ಯಾವಾಗಲೂ ಏನನ್ನಾದರು ಕೊಡುತ್ತಾರೆ." ಆದರೆ ಅವನು ಅಲ್ಲಿ ಮುಟ್ಟಿದಾಗ, ಸೌಲನೊಡನೆ ಬಲವಾದ ಸಂಬಂಧವಿದ್ದ ಮಹಾ ಯಾಜಕನಾದ ಅಹೀಮೆಲೆಕನನ್ನು ಭೇಟಿಯಾದನು.[11] ದಾವೀದನನ್ನು ನೋಡಿದ ಅಹೀಮೆಲೆಕನಿಗೆ ಕರೆಕರೆಯಾಯಿತು. ಹಿಂದೆ ದಾವೀದನು ದೇವದರ್ಶನ ಗುಡಾರಕ್ಕೆ ಅನೇಕ ಬಾರಿ ಬಂದಿದ್ದನು, ಆದರೆ ಆಗ ಅವನೊಡನೆ ರಾಜ ಪರಿವಾರದವರಾಗಲೀ ಅಥವಾ ಸೈನಿಕರ ಒಂದು ಗುಂಪಾಗಲೀ ಇರುತಿತ್ತು. ಈಗ ಅವನು ಒಬ್ಬನೇ ಬಂದನು. ತನ್ನನ್ನು ರಕ್ಷಿಸಿಕೊಳ್ಳಲು ಮತ್ತು ಸಹಾಯ ದೊರಕಿಸಿಕೊಳ್ಳಲು, ಸೌಲನು ತನ್ನನ್ನು ಒಂದು ಅತಿ ಗುಪ್ತವಾದ ಕಾರ್ಯದ ಮೇಲೆ ಕಳುಹಿಸಿದ್ದಾನೆಂದು, ದಾವೀದನು ಒಂದು ವಿಪರೀತವಾದ ಸುಳ್ಳನ್ನು ಸೃಷ್ಟಿಸಿದನು. ಯಾಜಕನು ದಾವೀದನಿಗೆ ಐದು ಮೀಸಲು ರೊಟ್ಟಿಗಳನ್ನು ಕೊಟ್ಟನು, ಕೇವಲ ಆ ರೊಟ್ಟಿಗಳು ಮಾತ್ರ ಇದ್ದವು.[12] ನಂತರ ಅವನು ಗುಡಾರದಲ್ಲಿ ಇಡಲ್ಪಟ್ಟಿದ್ದ ಗೊಲ್ಯಾತನ ಕತ್ತಿಯನ್ನು ಕೊಟ್ಟನು. ತನಗೆ ಬೇಕಾದದ್ದನ್ನು ದೊರಕಿಸಿಕೊಳ್ಳಲು,[13] ತಂತ್ರಗಳನ್ನು ರಚಿಸುತ್ತಾ ಮತ್ತು ಸುಳ್ಳು ಹೇಳುತ್ತಾ ದಾವೀದನು ಸೌಲನಂತೆ ವರ್ತಿಸಿದನೇ ಹೊರತು ದೇವರ ಹೃದಯಕ್ಕೆ ಒಪ್ಪುವ ಮನುಷ್ಯನಂತೆ ಅಲ್ಲ!

ದಾವೀದನು ಅಹೀಮಲೆಕನೊಂದಿಗೆ ಮಾತಾಡುತ್ತಿರುವಾಗ, ದೋಯೇಗನು ಅಲ್ಲಿರುವದನ್ನು ಕಂಡು ಕಸಿವಿಸಿಪಟ್ಟನು.[14] ದೋಯೇಗನು ಸೌಲನ ಪಶುಪಾಲರಲ್ಲಿ ಪ್ರಧಾನನಾಗಿದ್ದನು. (ಆ ಅಂಶವನ್ನು ಒಂದು ಕ್ಷಣ ಬದಿಗಿರಿಸಿರಿ.)

ತಕ್ಷಣವೇ ದಾವೀದನು ಅಲ್ಲಿಂದ ಓಡಿದನು. ಈ ಬಾರಿ ಅವನು ಫಿಲಿಷ್ಟಿಯದ ದಕ್ಷಿಣ ಪಶ್ಚಿಮದ ದಿಕ್ಕಿನಲ್ಲಿ ಮೂವತ್ತು ಮೈಲು ದೂರದ ಗತ್ ಊರಿಗೆ ಧಾವಿಸಿದನು. ಫಿಲಿಷ್ಟಿಯರಿಗಿಂದ ಸೌಲನಿಂದ ಭಯವಿರುವದನ್ನು ದಾವೀದನು ಅರಿತುಕೊಂಡನು. (ಅನೇಕ ಬಾರಿ ದುರದೃಷ್ಟಕರವಾಗಿ, ನಮ್ಮ "ವೈರಿಗಳಿಗಿಂತ" ನಮ್ಮ "ಸಹೋದರರಿಂದ" ಹೆಚ್ಚು ಭಯವಿರುತ್ತದೆ!) ಅವನು ಗತ್ ಊರಿಗೆ ಆಶ್ರಯ ಪಡೆಯಲು ಹೋದನು, ಆದರೆ ಅದು ಮೂರ್ಖತನದ ಕೆಲಸವಾಗಿತ್ತು! ಗೊಲ್ಯಾತನು ಯಾವ ಊರಿನವನು ಎಂದು ನಿಮಗೆ ನೆನಪಿದೆಯೆ? ಗತ್! (1 ಸಮುವೇಲ 17:23) ಗೊಲ್ಯಾತನನ್ನು ಕೊಂದು, ಮೀಕಲಳ ಮದಲಗಿತ್ತಿ ಬೆಲೆಯನ್ನು ಕೊಡುವದಕ್ಕಾಗಿ ಇನ್ನೂರು ಫಿಲಿಷ್ಟಿಯರನ್ನು ಕೊಂದು ಅವರ ದೇಹವನ್ನು ಊನಮಾಡಿದ, ಎಷ್ಟೋ ಫಿಲಿಷ್ಟಿಯರನ್ನು ಕೊಂದದ್ದಕ್ಕಾಗಿ "ದಾವೀದನು ಹತ್ತು ಸಾವಿರಗಟ್ಟಲೆಯಾಗಿ ಕೊಂದನು" ಎಂದು ಅವನ ಕುರಿತು ರಾಗವನ್ನು ಜನರು ಹಾಡಿದ ವ್ಯಕ್ತಿ - ದಾವೀದನು ಇಲ್ಲಿಗೆ ಬಂದನು. ಅವನು ಫಿಲಿಷ್ಟಿಯದ ಮಧ್ಯಕ್ಕೆ ಬಂದು, ಗೊಲ್ಯಾತನ ಊರಲ್ಲಿ ಧೈರ್ಯದಿಂದ

ಹೊಕ್ಕು (ಗೊಲ್ಯಾತನ ಕತ್ತಿಯು ಅವನ ಸೊಂಟದಲ್ಲಿತ್ತು), ಅರಸನ ಬಳಿಗೆ ಕರಕೊಂಡು ಹೋಗುವಂತೆ ಕೇಳಿಕೊಂಡನು![15]

ಯಾರಿಗೂ ಗುರುತು ಸಿಗದಂತೆ ತಾನಿರಬಹುದೆಂದು ದಾವೀದನು ನೆನೆಸಿದನು, ಆದರೆ ಅವನ ಕೆಂಗೂದಲನ್ನು ತಪ್ಪಾಗಿ ತಿಳುಕೊಳ್ಳಲು ಸಾಧ್ಯವಿರಲಿಲ್ಲ! ಮೊದಲು ಪ್ರಾಶಸ್ತ್ಯ ಪಡೆದ ಇಸ್ರಾಯೇಲ್ಯರ ಜಯ ಗೀತೆಯನ್ನು ಆಕೀಶನ ಆಳುಗಳೂ ಬಲ್ಲವರಾಗಿದ್ದರು: "ಸೌಲನು ಸಾವಿರಗಟ್ಟಳೆಯಾಗಿ ಕೊಂದನು, ದಾವೀದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನು"[16] - ಹತ್ತು ಸಾವಿರ ಫಿಲಿಷ್ಟಿಯರು, ಫಿಲಿಷ್ಟಿಯದಲ್ಲಿ ಅವಶ್ಯವಾಗಿ ಬೇಕಾಗಿದ್ದವರ ಪಟ್ಟಿಯಲ್ಲಿ ದಾವೀದನು ಮೊದಲಿಗನಾಗಿದ್ದನು!

ದಾವೀದನನ್ನು ಸೆರೆ ಹಿಡಿದರು,[17] ಅವನು ಭಯಪೀಡಿತನಾದನು. "ಅವನ ಸೇವಕರ ಮುಂದೆ ತನ್ನ ಬುದ್ಧಿಯನ್ನು ಮಾರ್ಪಡಿಸಿಕೊಂಡು ಗಡ್ಡದ ಮೇಲೆಲ್ಲಾ ಜೊಲ್ಲು ಸುರಸುತ್ತಾ ಕದಗಳನ್ನು ಕೆರೆಯುತ್ತಾ ತನ್ನನ್ನು ಹುಚ್ಚನಂತೆ ತೋರಿಸಿಕೊಂಡನು" (21:13). ದೇವರಿಂದ ಆಯ್ಕೆಯಾದವನು, ಇಸ್ರಾಯೇಲಿನ ಮುಂದಿನ ಅರಸನು, ಹುಚ್ಚನಂತೆ ನಟಿಸುತ್ತಿದ್ದನು!

ಆಕೀಶನಿಗೆ ಬೇಸರಿಕೆಯಾಯಿತು. "ನನ್ನ ಬಳಿಯಲ್ಲಿ ಹುಚ್ಚರು ಕಡಿಮೆಯೆಂದು ನೆನೆಸಿ ನನ್ನನ್ನು ಮರುಳಾಟದಿಂದ ಬೇಸರಗೊಳಿಸುವದಕ್ಕಾಗಿ ಇವನನ್ನು ತಂದಿರೋ?" (21:15). ದಾವೀದನನ್ನು ಅವರು ಬಿಟ್ಟುಬಿಟ್ಟರು. (ಹುಚ್ಚರು ದೇವರಿಂದ ಮುಟ್ಟಲ್ಪಟ್ಟವರು ಮತ್ತು ಅವರಿಗೆ ಯಾವ ಹಾನಿ ಮಾಡಬಾರದು ಎಂದು ಪುರಾತನ ಕಾಲದ ಜನರು ನಂಬಿದ್ದರು.[18])

ಈ ಘಟನೆಯನ್ನು ಓದುವಾಗ ನನ್ನಲ್ಲಿ ಮಿಶ್ರ ಭಾವನೆಗಳು ಹುಟ್ಟುತ್ತವೆ. ನಾನು ದಾವೀದನ ಚುರುಕಾದ ಆಲೋಚಿಸುವ ಶಕ್ತಿಯನ್ನು ಮೆಚ್ಚುತ್ತೇನೆ - ಮತ್ತು ದಾವೀದನು ತನ್ನನ್ನು ಬಿಡುಗಡೆಗೊಳಿಸಿದ್ದಕ್ಕಾಗಿ ದೇವರಿಗೆ ಮಾನ ಸಲ್ಲಿಸಿದನು.[19] ಆದರೆ ದಾವೀದನ ಆಲೋಚನೆಯು ಮೊದಲೇ ತಪ್ಪಿರದಿದ್ದರೆ, ಅವನು ತನ್ನನ್ನು ಉಳಿಸಿಕೊಳ್ಳಲು ಹುಚ್ಚನಂತೆ ನಟಿಸುವ ಪರಿಸ್ಥಿತಿಯಲ್ಲಿ ಇರುತ್ತಿರಲಿಲ್ಲ. ದೇವರಿಂದ ಅಭಿಷಿಕ್ತನಾದವನು ತನ್ನ ಕಣ್ಣುಗಳನ್ನು ಉರಿಳಿಸಿ ... ಆರ್ಭಟಿಸುತ್ತಾ ... ಹುಚ್ಚು ಮಾತುಗಳನ್ನು ಕೂಗುತ್ತಾ ... ತನ್ನ ಉಗುರುಗಳಿಂದ ಕದಗಳನ್ನು ಕೆರೆಯುತ್ತಾ[20] ... ಇರುವರನ್ನು ನೋಡುವದಕ್ಕೆ ನನಗೆ ದುಃಖವಾಗುತ್ತದೆ (ಆಮಪ್ಲಿಫೈಡ್ ಬೈಬಲ್ ನೋಡಿರಿ).

ದಾವೀದನು ಎಷ್ಟರ ವರೆಗೆ ಕೆಳಗೆ ಇಳಿಯಬಹುದು? ದಾವೀದನಿಗೆ ಉಳಿದಿರುವದು ಒಂದೇ ಇತ್ತು, ಒಂದು ಗೂಡನ್ನು ಹುಡುಕಿ ಅದರೊಳಗೆ ಸೇರಿಕೊಳ್ಳುವದು - ಮತ್ತು ಅವನು ಹಾಗೆಯೇ ಮಾಡಿದನು. ಗತ್ ಊರಿನಿಂದ ಅವನು, ನಮ್ಮ ಪಾಠವು ಪ್ರಾರಂಭವಾದ ಗವಿಗೆ ಓಡಿದನು - ಅದುಲ್ಲಾಮ್ ಗವಿ.[21]

ಅದುಲ್ಲಾಮ್ ಯೆಹೂದದಲ್ಲಿನ ಒಂದು ಪಟ್ಟಣವಾಗಿತ್ತು, ಗತ್ ಮತ್ತು ಬೇತ್ಲೆಹೇಮಿನ ಮಧ್ಯದಲ್ಲಿತ್ತು.[22] ಅದರ ಸಮೀಪದಲ್ಲಿ ಗವಿಗಳಿದ್ದ ಒಂದು ಬೆಟ್ಟವಿತ್ತು, ಅದಕ್ಕೆ ಒಂದೇ ದ್ವಾರವಿರಲಿಲ್ಲ. ಬದಲಾಗಿ ಮೈಲುಗಟ್ಟಳೆ ಉದ್ದನೆಯ ನೂರಾರು ಸುರಂಗಗಳಿಗೆ ನಡೆಸುವ ಸಾವಿರಾರು ಕಂಡಿಗಳಿದ್ದವು. ಅದರಲ್ಲಿ ನೀರು ಹಾವುಗಳು ಮತ್ತು ಇತರ ವಿಷಮಯವಾದ ಪ್ರಾಣಿಗಳಿದ್ದವು. ಇಂದು ಮಾರ್ಗದರ್ಶಿಗಳು ಪ್ರವಾಸಿಗಳನ್ನು ಅಲ್ಲಿ ಕರಕೊಂಡು ಹೋಗುವದಿಲ್ಲ, ಕಾರಣವೇನೆಂದರೆ ಈ ಗವಿಗಳು ದರೋಡೆಕೋರರ ಮತ್ತು ಕಳ್ಳರ ಅಡಗುತಾಣವಾಗಿದೆ. ಲಿನ್ ಆಂಡರ್ಸನ್ ಅವರು ಇದನ್ನು "ಜಗತ್ತಿನ ಕಂಕುಳ" ಎಂದು ಕರೆಯುತ್ತಾರೆ.[23] "ನನ್ನ ಪ್ರಾಣಕ್ಕೆ ಹಿತಚಿಂತಕರು ಒಬ್ಬರೂ ಇಲ್ಲ" ಎಂದು ದಾವೀದನು ಹೇಳುವಾಗ ಇಲ್ಲಿದ್ದನು (ಕೀರ್ತನೆ 142:4). ದಾವೀದನ ಜೀವಿತದಲ್ಲಿನ ಅತಿ ಕುಗ್ಗಿದ ಕ್ಷಣಗಳು ಇದಾಗಿತ್ತು.

ನನ್ನ ವಾದವೇನೆಂದರೆ: ದಾವೀದನಿಗೆ ಕೆಟ್ಟ ಸಮಯಗಳೂ ಉಂಟಾದರೆ, ಅವು ನಿನಗೂ ನನಗೂ ಸಂಭವಿಸಬಹುದು. ಕೆಲ ವರ್ಷಗಳ ಹಿಂದೆ, ನನ್ನ ಒಬ್ಬ ಮಿತ್ರರು, ಯೌವನಸ್ಥ ಬ್ಯಾಂಕರ್, ಅವರಿಗೆ ಮಕ್ಕಳಲ್ಲಿ ತೋರಿಬರುವ ಮಧುಮೇಹರೋಗವಿದೆ ಎಂದು

ಕಂಡುಹಿಡಿಯಿತು. ಅವರು ಒಬ್ಬ ಜಾಣ, ಹಸನ್ಮುಖಿಯಾದ, ಕ್ರೀಡಾಸಕ್ತ ಯೌವನಸ್ಥರಾಗಿದ್ದರು (ಈಗಲೂ ಇದ್ದಾರೆ) - ಈ ಶೋಧವು ಅವರನ್ನು ಒಂದು ದಾರಿ ತಪ್ಪಿದ ಗಡಿಯು ಬಡಿದಂತೆ ಬಡಿಯಿತು. ಅನೇಕ ವಾರಗಳವರೆಗೆ ಅವರು, ವಿವೇಕಹೀನರೂ ಮತ್ತು ಕುಗ್ಗಿಹೋದವರೂ ಆದರು. ಅವರ ವಿವೇಕಹೀನ ಕಾರ್ಯದ ಉದಾಹರಣೆ ಇಲ್ಲಿದೆ: ಟಿ. ವಿ. ಯಲ್ಲಿ ಸಾಕರ್ ಆಟವನ್ನು ಗಮನಿಸುತ್ತಿದ್ದಂತೆಯೇ ಅವರು ಅಳುವದಕ್ಕೆ ಪ್ರಾರಂಭಿಸಿದರು. "ನಾನು ಇನ್ನೆಂದೂ ಸಾಕರ್ ಆಡಲು ಸಾಧ್ಯವಿಲ್ಲ" ಎಂದು ಅತ್ತರು. ಅವರು ಹಿಂದೆ ಎಂದೂ ಸಾಕರ್ ಆಡಿರಲಿಲ್ಲ, ಎಂದಿಗೂ ಸಾಕರ್ ಆಡುವ ಯೋಚನೆಯೂ ಇರಲಿಲ್ಲ, ಆದರೆ ಅದು ಯಾವ ವ್ಯತ್ಯಾಸ ಮಾಡಲಿಲ್ಲ. ಕ್ರೀಡೆಯಲ್ಲಿ ಭಾಗವಹಿಸುವ ದಿನಗಳು ತೀರಿದವೆಂದು ಅಂದುಕೊಂಡು ತಮ್ಮನ್ನು ಅಂಗಹೀನ ನೆಂದು ಅವರು ತಿಳುಕೊಂಡರು. ದೇವರ ಸಹಾಯದಿಂದ ಮತ್ತು ಪ್ರೀತಿಸುವ ಕುಟುಂಬದ ಮತ್ತು ಮಿತ್ರರ ಆಧಾರದಿಂದ, ಅವರು ಬೇಗನೆ ಚೇತರಿಸಿಕೊಂಡು, ಹಿಂದಿನಂತೆ ಆಗಿದ್ದಾರೆ. ಈಗ ಅವರು ತಮ್ಮ ಪ್ರಾರಂಭದ ಪ್ರತಿಕ್ರೀಯೆಯನ್ನು ನೆನೆಪಿಸಿಕೊಳ್ಳುತ್ತಾರೆ ಮತ್ತು ನಗುತ್ತಾರೆ ಆದರೆ ತಾವು ಹುಚ್ಚರಂತೆ ವರ್ತಿಸಿದ್ದಾಗಿ ಒಪ್ಪಿಕೊಳ್ಳುತ್ತಾರೆ.

ಅಪಾಯ ತಗುಲಿದಾಗ, ನಾವು ಎಂದೂ ವಿವೇಕ ಹೀನರಾಗುವದಿಲ್ಲವೆಂದು ಅಂದುಕೊಳ್ಳುತ್ತೇವೆ, ಆದರೆ ನಮಗೆ ಗೊತ್ತಿಲ್ಲ. ನಾನು ಹೇಗೆ *ಪ್ರತಿಕ್ರೀಯೆ ವ್ಯಕ್ತಪಡಿಸಬಲ್ಲೆನು* ಎಂದು ನನಗೆ ಗೊತ್ತು, ಹಾಗೆ ಆಗಲಿಕ್ಕಿಲ್ಲ. ಕೆಟ್ಟ ಸಮಯ ಬಂದಾಗ ನಾವು ಮೊದಲು ಮೂರ್ಖರಂತೆ ನಟಿಸಿದರೂ, ಬಿಟ್ಟು ಬಿಡುವದು ಬೇಡವೆಂದು ನಾನು ಈ ಮಾತನ್ನು ಹೇಳಿದ್ದೇನೆ. ಇದು ಯಾರಿಗೂ ಆಗಬಹುದೆಂದು ತಿಳಿದುಕೊಳ್ಳಿರಿ - ಮತ್ತು ದೇವರ ಸಹಾಯದಿಂದ ನಾವು ಬದುಕಬಹುದೆಂದು ಅರ್ಥಮಾಡಿಕೊಳ್ಳಿರಿ. ದಾವೀದನು ಹಾಗೆ ಮಾಡಿದನು; ನನ್ನ ಸ್ನೇಹಿತನು ಹಾಗೆ ಮಾಡಿದನು.

## III. ನೀನು ಮತ್ತು ನಾನು ಹಾಗೆಯೇ ಮಾಡಬಹುದು ನಿಮ್ಮ ಕಾರ್ಯಗಳಿಗಾಗಿ ನೀವೆ ಜವಾಬ್ದಾರಿಯನ್ನು ಸ್ವೀಕರಿಸಿರಿ (22:1-23)

ದಾವೀದನು ಅದುಲ್ಲಾಮ ಗವಿಯನ್ನು ಮೊದಲು ತಲುಪಿದಾಗ ಕೀರ್ತನೆ 142 ರಚಿಸಲ್ಪಟ್ಟಿತು. 1 ಸಮುವೇಲ 22 ದಾವೀದನು ಬಹುಕಾಲ ಒಬ್ಬೊಂಟಿಗನಾಗಿರಲಿಲ್ಲವೆಂದು ಸೂಚಿಸುತ್ತದೆ.

> ದಾವೀದನು ... ಅಲ್ಲಿಂದ ತಪ್ಪಿಸಿಕೊಂಡು ಅದುಲ್ಲಮೆಂಬ ಗವಿಗೆ ಹೋದನು. ಈ ವರ್ತಮಾನವು ಅವನ ಅಣ್ಣಂದಿರಿಗೂ ಬೇರೆ ಎಲ್ಲಾ ಸಂಬಂಧಿಕರಿಗೂ ಮುಟ್ಟಲಾಗಿ ಅವರೂ ಬಂದು ಅವನನ್ನು ಸೇರಿಕೊಂಡರು. ಇದಲ್ಲದೆ ಕುಗ್ಗಿದವರೂ ಸಾಲಗಾರರೂ ಮನನೊಂದಿದವರೂ ಅಗಿರುವ ಸರ್ವಜನರೂ ಬಂದು ಅವನನ್ನು ಆಶ್ರಯಿಸಿಕೊಳ್ಳಲು ಅವನು ಸುಮಾರು ನಾನೂರು ಜನರಿಗೆ ನಾಯಕನಾದನು (22:1, 2).

ಮೊದಲು ದೇವರು ದಾವೀದನಿಗೆ ಮಾನಸಿಕವಾಗಿ ಬಲಪಡಿಸಿದನು. ದಾವೀದನಿಗೆ ಅವನ ಕುಟುಂಬವನ್ನು ಕೊಟ್ಟನು. "ಅವನ ಅಣ್ಣಂದಿರಿಗೂ ಬೇರೆ ಎಲ್ಲಾ ಸಂಬಂಧಿಕರಿಗೂ ಮುಟ್ಟಲಾಗಿ ಅವರೂ ಬಂದು ಅವನನ್ನು ಸೇರಿಸಿಕೊಂಡರು." ದಾವೀದನ ಕುಟುಂಬವೂ ಸೌಲನಿಂದಾಗಿ ಆಪತ್ತಿನಲ್ಲಿತ್ತು.[24]

ನಂತರ ದಾವೀದನಿಗೆ ದೇವರು ಪ್ರಾಕೃತವಾಗಿ ಬೆಂಬಲಿಸಿದನು. ದಾವೀದನಿಗೆ ಒಂದು ಉದ್ಯೋಗವನ್ನು ಕೊಟ್ಟನು. ತನಗಾಗಿ ಕನಿಕರ ಪಡುತ್ತಾ ಕುಳಿತುಕೊಳ್ಳುವ ಬದಲು, ಒಂದು ಗ್ರಹಿಸಲು ಅಸಾಧ್ಯವಾದ ಸೇನೆಯನ್ನು ಸೇರಿಸುವ ಸವಾಲನ್ನು ದಾವೀದನಿಗೆ ದೇವರು ಕೊಟ್ಟನು. ಇಂದಿನ ನಮ್ಮ ಭಾಗವು ದಾವೀದನ ಸುತ್ತಲೂ "ಮೂರಡಿ"ಗಳು ಸುತ್ತಿಕೊಂಡರು

ಎಂದು ತಿಳಿಸುತ್ತದೆ. ಕುಗ್ಗಿದವರು, ಸಾಲಗಾರರು, ಮನನೊಂದವರು. "ಕುಗ್ಗಿದವರು" ಎಂಬ ಪದವು ಇಬ್ರಿಯ ಭಾಷೆಯಲ್ಲಿ ತುಳಿತಕ್ಕೊಳಗಾದವರ ಗುಂಪು ಎಂದು ಸೂಚಿಸುತ್ತದೆ. "ಸಾಲಗಾರರು" ಇವರು ಸೌಲನು ವಿಧಿಸಿದ ಭಾರವಾದ ಕರವನ್ನು ಕೊಡುವದಕ್ಕಾಗದವರು; ಅವರು ಅಥವಾ ಅವರ ಕುಟುಂಬದವರು ತಾವು ಮಾಡಿದ ಸಾಲವನ್ನು ತೀರಿಸಲು ಮಾರಲ್ಪಡಬಾರದೆಂದು ಓಡಿಹೋದರು. "ಮನನೊಂದವರು" ಈ ಪದದ ಭಾಷಾಂತರ ಸೂಚಿಸುವಂತೆ ಇವರು ಅನ್ಯಾಯಕ್ಕೊಳಗಾದವರು ಮತ್ತು ಹೀನೈಸಲ್ಪಟ್ಟವರು ಮತ್ತು ಬದಲಾವಣೆಯನ್ನು ಆಸಕ್ತಿಯಿಂದ ಕಾಯುತ್ತಿದ್ದರು. ದಾವೀದನೊಬ್ಬನೇ ಅಲ್ಲಿ ವೇದನೆಯನ್ನು ಅನುಭವಿಸುತ್ತಿರಲಿಲ್ಲ; ಸೌಲನ ಆಳ್ವಿಕೆಯಲ್ಲಿ ಸಂಪೂರ್ಣ ರಾಷ್ಟ್ರವೇ ನರಳುತ್ತಿತ್ತು.

ಈ ಜನರು ಯುದ್ಧಕ್ಕಾಗಿ ತರಬೇತಿ ಹೊಂದಿದವರಲ್ಲ. ಇದು ಮನನೊಂದವರ ಗುಂಪಾಗಿತ್ತು, ಅದರಲ್ಲಿ ಬಹು ಜನರು ಯಾರೊಂದಿಗೂ ಹೊಂದಿಕೊಳ್ಳಲು ಸಾಧ್ಯವಿರಲಿಲ್ಲ. (ನಂತರದ ಕತೆಯಲ್ಲಿ ನಾವು ಓದುತ್ತೇವೆ, "ದಾವೀದನ ಜೊತೆಯಲ್ಲಿ ಹೋಗಿದ್ದ ಜನರಲ್ಲಿ ದುಷ್ಟರೂ ಮೂರ್ಖರೂ ಆದ ಕೆಲವು ಜನರು" [1 ಸಮುವೇಲ 30:21]. ಒಂದು ಹಂತದಲ್ಲಿ ಈ ಜನರು ದಾವೀದನನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದರು! [ಹೋಲಿಸಿ 1 ಸಮುವೇಲ 30:6]) ಇಂಥ ಅನರ್ಹರ ಗುಂಪನ್ನು ಒಂದು ಸೇನೆಗೆ ಹೋಲುವಂತೆ ಆಕಾರ ನೀಡುವದನ್ನು ಯಾರಾದರೂ ಹೇಗೇ ಮಾಡಬಹುದು? ನನಗಂತೂಗೊತ್ತಿಲ್ಲ, ಆದರೆ ದಾವೀದನು ದೇವರ ಈ ಸವಾಲನ್ನು ಸ್ವೀಕರಿಸಿದನು. ದೇವರ ಚಿತ್ತವನ್ನು ನೆರವೇರಿಸುವಲ್ಲಿ ಚಟುವಟಿಕೆಯಿಂದ ದಾವೀದನು ಪುನಃ ಕಾರ್ಯತತ್ಪರನಾದನು. ತನ್ನ ರಾಜ್ಯಕ್ಕೆ ಬಲ ಕೊಡುವ ಬುನಾದಿಯನ್ನು ಅವನು ಕಟ್ಟುತ್ತಿದ್ದನು. ಅವನ ಆಳ್ವಿಕೆಯಲ್ಲಿ ಅವನ ಸಂಗಡ ಉಳಿಯುವಂತೆ ನಾಯಕತ್ವವನ್ನು ಬೆಳೆಸುತ್ತಿದ್ದನು. ದಾವೀದನ ಪರಾಕ್ರಮಿ ಜನರ ಕುರಿತು 2 ಸಮುವೇಲ 23 ಹೇಳುವಾಗ, "ಮೂವತ್ತು ಮಂದಿ ಪ್ರಸಿದ್ಧ ಶೂರರಲ್ಲಿ ದಾವೀದನು ಅದುಲ್ಲಾಮ್ ಗವಿಯಲ್ಲಿದ್ದಾಗ ... ಅವನ ಮೂರು ಮಂದಿ ಬಂದರು" (23:13). ದಾವೀದನು ಅರಸನಾದಾಗ ಅವನ "ಅಸ್ಥಾನಾವು" ಅವನು ತರಬೇತಿ ಕೊಡಿಸಿ, ಭರವಸೆಯಿಟ್ಟ ಜನರು ಮತ್ತು ಅವನೊಂದಿಗೆ ಅಡವಿಯಲ್ಲಿ ಜೊತೆ ಜೊತೆಯಾಗಿ ಯುದ್ಧಮಾಡಿದವರಿಂದ ಕೂಡಿತ್ತು.

ಕೆಟ್ಟ ದಿನಗಳು ಬಂದಾಗ ಮತ್ತು ನಾವು ಮೂರ್ಖತನದಿಂದ ಕೆಲಸ ಮಾಡಿದಾಗ, ದೇವರು ನಮ್ಮ ಮುಂದೆ ಇರಿಸುವ ಸವಾಲುಗಳ ಮೇಲೆ ಲಕ್ಷ್ಯವಿಡುವದೇ, ನಮ್ಮ ತಲೆಗಳನ್ನು ಸರಿಪಡಿಸಿಕೊಳ್ಳುವದಕ್ಕೆ ಇರುವ ಉತ್ತಮವಾದ ಮಾರ್ಗಗಳಲ್ಲಿ ಒಂದು. ನಮ್ಮ ವಿಷಯದಲ್ಲಿ ಬೇಸೆರ ಪಟ್ಟುಕೊಳ್ಳುವದನ್ನು ನಿಲ್ಲಿಸಿ, ಇತರರಿಗೆ ಸಹಾಯ ಮಾಡುವದರಲ್ಲಿ ಕಾರ್ಯತತ್ಪರ ರಾಗಬೇಕು.

ಕೊನೆಯಲ್ಲಿ, ದೇವರು ದಾವೀದನಿಗೆ ಆತ್ಮಿಕ ಬಲವನ್ನು ಕೊಟ್ಟನು. 1 ಸಮುವೇಲ 22:5 ಗಮನಿಸಿ: "ಗಾದ್ ಪ್ರವಾದಿಯು ದಾವೀದನಿಗೆ, 'ನೀನು ಈ ದುರ್ಗದಲ್ಲಿರಬಾರದು;[25] ಇದನ್ನು ಬಿಟ್ಟು ಯೆಹೂದ ದೇಶಕ್ಕೆ ಹೋಗು' ಎಂದು ಹೇಳಿದದರಿಂದ ಅವನು ಹೆರೆತ್ ಅರಣ್ಯಕ್ಕೆ ಹೋದನು." ಒಂದು ಹಂತರದಲ್ಲಿ ಗಾದ್ ಪ್ರವಾದಿಯು ದಾವೀದನ ಸೇನೆಯನ್ನು ಸೇರಿ ಕೊಂಡು ಅವನ ಸಲಹೆಗಾರರಲಲ್ಲಿ ಒಬ್ಬನಾದನು. ದಾವೀದನು ಅರಸನಾದ ತರುವಾಯ, ಗಾದನೂ ಅವನ "ದರ್ಶಿಯಾಗಿದ್ದನು" (1 ಪೂರ್ವಕಾಲ ವೃತ್ತಾಂತ 21:9). ಕೊನೆಗೆ, ದಾವೀದನ ಆಳ್ವಿಕೆಯನ್ನು ದಾಖಲಿಸುವವರಲ್ಲಿ ಗಾದನೂ ಒಬ್ಬನಾದನು (1 ಪೂರ್ವಕಾಲ ವೃತ್ತಾಂತ 29:29).

ದಾವೀದನ ಪರಿಸ್ಥಿಯಲ್ಲಿ ಸುಧಾರಣೆಯಾಗುತ್ತಿದ್ದಂತೆ, ಅವನು ತನ್ನ ಮೂರ್ಖತನದ ಕಾರ್ಯಗಳ ಪರಿಣಾಮವನ್ನು ನೋಡಲಾರಂಭಿಸಿದನು. ಒಂದು ದಿನ, ಸೌಲನು ಒಂದು ಮರದ ಕೆಳಗೆ, ತನ್ನ ಸೇನೆಯ ಅಧಿಕಾರಿಗಳೊಂದಿಗೆ ಕುಳಿತಿರುವಾಗ, ಅರಸನು ಸ್ವತಃ ಕರುಣೆಯಲ್ಲಿ ಮುಳುಗಿದ್ದನು. "ನೀವು ನನ್ನ ಚಿಂತೆಯನ್ನೆ ಬಿಟ್ಟಿರಿ" (22:8) ಎಂದು ಅವನು

ಕೊರಗುತ್ತಿದ್ದನು. ಎದೋಮ್ಯನಾದ ದೋಯೇಗನು ಬದಿಯಲ್ಲಿ ನಿಂತಿದ್ದನು. (ಅವನ ನೆನೆಪಿದೆಯೋ? ದಾವೀದನನ್ನು ನೋಬದಲ್ಲಿನ ಗುಡಾರದಲ್ಲಿ ನೋಡಿದವನು ಅವನೇ.) "ಇಷಯನ ಮಗನು ನೋಬದಲ್ಲಿರುವ ಅಹೀಟೂಬನ ಮಗನಾದ ಅಹೀಮೆಲೆಕನ ಬಳಿಗೆ ಬಂದದ್ದನ್ನು ಕಂಡೆನು. ಅವನು ಇವನಿಗೆ ಯೆಹೋವನ ಚಿತ್ತವನ್ನು ತಿಳಿಸಿ,[26] ಆಹಾರವನ್ನೂ ಫಿಲಿಷ್ಟಿಯನಾದ ಗೊಲ್ಯಾತನ ಕತ್ತಿಯನ್ನೂ ಕೊಟ್ಟನು" ಎಂದು ದೋಯೇಗನು ಹೇಳಿದನು (22:9, 10). ಅಹೀಮೆಲೆಕನು ಮೊದಲು ನಿರಾಕರಿಸಿದ್ದು ಅಥವಾ ದಾವೀದನ ಮೋಸವನ್ನು ದೋಯೇಗನು ಹೇಳಲಿಲ್ಲ. ಸೌಲನು ಮತ್ತೊಮ್ಮೆ ರೊಚ್ಚಿಗೆದ್ದನು. ಅವನು ಅಹೀಮೆಲೆಕನನ್ನೂ ಮತ್ತು ಉಳಿದ ಯಾಜಕರನ್ನೂ ಕರೆಕಳುಹಿಸಿದನು ಮತ್ತು ಅವರನ್ನು ಕೊಲ್ಲಿಸಿದನು. ನಂತರ ನೋಬದ ಪಟ್ಟಣವನ್ನು ಸಂಪೂರ್ಣವಾಗಿ ನಾಶ ಮಾಡಿದನು: ಪುರುಷರು, ಸ್ತ್ರೀಯರು, ಮಕ್ಕಳು, ಕೂಲುಗಳೂ, ಪ್ರಾಣಿಗಳೂ ಸಹಿತವಾಗಿ![27]

ಒಬ್ಬ ಯಾಜಕ - ಅಭಿಯಾತಾರ, ಅಹೀಮೆಲೆಕನ ಮಗನು ತಪ್ಪಿಸಿಕೊಂಡನು.[28] ಅಭಿಯಾತಾರನು ದಾವೀದನ ಬಳಿಗೆ ಬಂದು ನಡೆದದ್ದನ್ನೆಲ್ಲ ಹೇಳಿದನು. ಈ ದುರಂತಕ್ಕೆ ಯಾರನ್ನಾದರೂ ದೂಷಿಸುವದು ದಾವೀದನಿಗೆ ಸರಳವಾಗಿತ್ತು. ಅವನು, "ಇದೆಲ್ಲ ಸೌಲನು ತಪ್ಪು! ಅವನು ಒಂದು ವೇಳೆ ನನ್ನನ್ನು ಕೊಲ್ಲಲೂ ಪ್ರಯತ್ನಿಸದಿದ್ದರೆ, ಇದು ಎಂದಿಗೂ ಆಗುತ್ತಿರಲಿಲ್ಲ!" ಅಥವಾ "ಸೌಲನು ವಿಪರೀತವಾಗಿ ಪ್ರತಿಕ್ರೀಯೆ ತೋರಿಸದಿದ್ದರೆ, ನಿನ್ನ ಕುಟುಂಬವು ಬದುಕಿರುತ್ತಿತ್ತು!" ಮತ್ತು, ಅವನು ಅಹೀಮೆಲೆಕನನ್ನೂ ದೂಷಿಸಬಹುದಿತ್ತು, "ನಿನ್ನ ತಂದೆಯು ನನಗೆ ಸವಾಲು ಹಾಕದಿದ್ದರೆ, ನಾನು ಸುಳ್ಳು ಹೇಳುವದಕ್ಕೆ ಒತ್ತಾಯಿಸಲ್ಪಡುತಿರಲಿಲ್ಲ." ದಾವೀದನು ಹೀಗೂ ಹೇಳಬಹುದಿತ್ತು, "ಅದು ದುರಾದೃಷ್ಟ. ಒಂದು ವೇಳೆ ದೋಯೇಗನು ಅಲ್ಲಿರದಿದ್ದರೆ, ಇದು ಆಗುತ್ತಿರಲಿಲ್ಲವೆಂದು ನಾನು ನೆನೆಸು ತ್ತೇ ನೆ, ಹೌದಲ್ಲವೇ?" ದಾವೀದನು, ಹೇಗೂ, ಯಾರ ಮೇಲೆಯೂ ಆರೋಪವನ್ನು ಹಾಕಲಿಲ್ಲ ಮತ್ತು ನೆವ ಹೇಳಲಿಲ್ಲ. ದುಃಖಿತನಾಗಿ ಅವನು ಹೀಗೆ ಹೇಳಿದನು, "ಎದೋಮ್ಯನಾದ ದೋಯೇಗನನ್ನು ನಾನು ಅಲ್ಲಿ ಕಂಡಾಗಲೇ ಇವನು ಸೌಲನಿಗೆ ಈ ಸಂಗತಿಯನ್ನು ತಿಳಿಸುವನೆಂದು ನೆನೆಸಿಕೊಂಡೆನು. ನಿನ್ನ ಸಂಬಂಧಿಕರ ವಧೆಗೆ ನಾನೇ ಕಾರಣನಾದೆನಲ್ಲಾ!" (ವಚನ 22). NIV ಯಲ್ಲಿ ಹೀಗಿದೆ, "ನಾನು ನಿನ್ನ ತಂದೆಯ ಸರ್ವ ಕುಟುಂಬದವರ ಮರಣಕ್ಕೆ ನಾನೇ ಜವಬ್ದಾರನು." ದಾವೀದನು, "ಸೌಲನು ಜವಾಬ್ದಾರನು" ಅಥವಾ "ಅಹೀಮೆಲೆಕನು ಜವಾಬ್ದಾರನು" ಅಥವಾ "ದೋಯೇಗನು ಜವಾಬ್ದಾರನು" ಎಂದು ಹೇಳಲಿಲ್ಲ ಆದರೆ "*ನಾನು* ಜವಾಬ್ದಾರನು" ಎಂದನು.

ಕೆಟ್ಟ ದಿನಗಳು ಬರುವಾಗ ನಾವು ಯಾರಾದರೂ ಮೂರ್ಖತನದಿಂದ ಕಾರ್ಯ ಮಾಡಬಹುದು - ಆದರೆ ಅದು ನಾವು ನಮ್ಮ ಮೂರ್ಖತನಕ್ಕೆ ಜವಾಬ್ದಾರರಲ್ಲ ವೆಂದು ಅರ್ಥವಲ್ಲ. ಒಂದು ಹಂತದಲ್ಲಿ, ನಮ್ಮ ಜೀವನದಲ್ಲಿ ದೇವರು ಪುನಃ ಕಾರ್ಯ ಮಾಡುವಂತೆ ಅವಕಾಶ ಮಾಡೋಣ ಮತ್ತು ನಮ್ಮ ಆಲೋಚನೆಗಳನ್ನು ಸರಿಪಡಿಸಿಕೊ ಳ್ಳೋಣವೆಂದು ನಾನು ಪ್ರಾರ್ಥಿಸುತ್ತೇನೆ. ನಾವು ಆ ಹಂತಕ್ಕೆ ಬಂದಾಗ, ನಮ್ಮ ಕಾರ್ಯಗಳ ಜವಾಬ್ದಾರಿಯನ್ನು ತೆಗೆದುಕೊಳ್ಳುವಷ್ಟರ ಮಟ್ಟಿಗೆ ಯಥಾರ್ಥರೂ ಮತ್ತು ದೊಡ್ಡವರೂ ಆಗೋಣ. ನಮ್ಮ ಕಾರ್ಯಗಳಿಗಾಗಿ ಇನ್ನೊಬ್ಬರನ್ನು ದೂಷಿಸುವದು ಬೇಡ; ಪರಿಸ್ಥಿತಿಯನ್ನು ದೂಷಿಸುವದೂ ಬೇಡ; ವೈಯಕ್ತಿಕ ಜವಾಬ್ದಾರಿಯನ್ನು ಹೊತ್ತುಕೊಳ್ಳೋಣ.

ದಾವೀದನು ಅಭಿಯಾತಾರನನ್ನು ಭೇಟಿ ಮಾಡಿದಂತೆ, ನಾವು ಘಾಸಿಗೊಳಿಸಿದ ವ್ಯಕ್ತಿಯನ್ನು ಭೇಟಿ ಮಾಡುವ ಸಾಧ್ಯತೆ ಇದೆ (ಮತ್ತಾಯ 5:23, 24 ಗಮನಿಸಿರಿ). ಆಗ ನಾವು, "ನನ್ನದು ತಪ್ಪಾಯಿತು, ನಾನು ನನ್ನ ತಲೆ ಕೆಡಿಸಿಕೊಂಡಿದ್ದೆನು. ಸ್ವಲ್ಪ ಸಮಯ ನಾನು ಮೂರ್ಖನಾಗಿ ನಡಕೊಂಡೆನು; ನಾನು ಮಾಡಿರುವದಕ್ಕೂ ಮತ್ತು ಮಾತಾಡಿರುವದಕ್ಕೂ ನನಲ್ಲಿ ಯಾವ ನೆಪವಿಲ್ಲ. ನಿನ್ನ ಹೃದಯದಲ್ಲಿ ನನ್ನನ್ನು ಕ್ಷಮಿಸುವದಕ್ಕೆ ಸ್ಥಳವಿದೆ ಎಂದು

ನಂಬುತ್ತೇನೆ" ಎಂದು ಹೇಳಬಹುದು.[29] ನಮ್ಮ ಕಾರ್ಯಗಳಿಗಾಗಿ ನಾವು ಜವಾಬ್ದಾರಿಕೆಯನ್ನು ಸ್ವೀಕರಿಸದಿದ್ದರೇ, ನಾವು ಕೆಟ್ಟ ಸಮಯಗಳಲ್ಲಿ ನಮ್ಮ ನಿಯತ್ತನ್ನು ಸ್ಥಿರವಾಗಿ ಇಟ್ಟುಕೊಂಡು ಬದುಕುವದು ಅಸಾಧ್ಯ.

## IV. ಜನರು ನಿಮ್ಮನ್ನು ಕೈಬಿಟ್ಟರೆ ಆಶ್ಚರ್ಯ ಪಡಬೇಡಿರಿ (23:1-29)

ಅವನನ್ನು ಬೆಂಬಲಿಸುವ ಜನರಿಂದ ಸುತ್ತುವರಿಯಲ್ಪಟ್ಟ ದಾವೀದನು ಕೊನೆಗೂ ಗವಿಯಿಂದ ಹೊರಬಂದನು, ಆದರೆ ಅವನ ಕೆಟ್ಟ ದಿನಗಳು ತೀರಿದವೆಂದು ಅರ್ಥವಲ್ಲ. ಕೆಟ್ಟ ಸಮಯಗಳು ಬರುವಾಗ, ಜನರು ನಿಮ್ಮ ಕೈಬಿಡುವರು ಎಂಬ ಕಠಿಣವಾದ ಪಾಠವನ್ನು ದಾವೀದನು ಬಹು ಬೇಗನೆ ಕಲಿತನು - ನೀವು ಹಾನಿ ಮಾಡದ ಜನರು, ಬಹುಶಃ ನೀವು ಸಹಾಯ ಮಾಡಿದ ಜನರು ಇರಬಹುದು.

ಮುಂದಿನ ಅಧ್ಯಾಯವು ಪ್ರಾರಂಭವಾಗುವದು: "ಫಿಲಿಷ್ಟಿಯರು ಕೆಯಿಲಾಲಕ್ಕೆ ಮುತ್ತಿಗೆ ಹಾಕಿ ಅಲ್ಲಿನ ಕಣಗಳನ್ನು ಸೂರೆ ಮಾಡುತ್ತಿರುವ ವರ್ತಮಾನವು ದಾವೀದನಿಗೆ ಮುಟ್ಟಿತು" (23:1).[30] ಕೆಯಿಲಾಲವು ವೈರಿಗಳ ಪಾಳೆಯದ ಹಿಂದೆ ಇರುವ ಇಸ್ರಾಯೇಲ್ ಪಟ್ಟಣವಾಗಿತ್ತು, ಆದುದರಿಂದ ಅದು ದಾಳಿಗೆ ತುತ್ತಾಗುವದು ಬಹು ಸುಲಭವಾಗಿತ್ತು.[31] ಫಿಲಿಷ್ಟಿಯರೊಡನೆ ಯುದ್ಧ ಮಾಡುವದು ಸೌಲನ ಕೆಲಸವಾಗಿತ್ತು, ಆದರೆ ಅವನು ವೈರಿಗಳೊಡನೆ ಯುದ್ಧ ಮಾಡುವ ಬದಲು ದಾವೀದನನ್ನು ಹುಡುಕುವದರಲ್ಲಿ ಸಮಯ ಹಾಳು ಮಾಡುತ್ತಿದ್ದನು (ಹೋಲಿಸು 1 ಸಮುವೇಲ 9:16). ಆದುದರಿಂದ ಜನರು ಸಹಾಯವನ್ನು ಹುಡುಕುತ್ತಾ ದಾವೀದನ ಬಳಿಗೆ ಬಂದರು.

ದಾವೀದನು, "ನಾನು ಹೋಗಿ ಆ ಫಿಲಿಷ್ಟಿಯರನ್ನು ಹೊಡಿಯಬಹುದೋ ಎಂದು ಯೆಹೋವನನ್ನು ಕೇಳಿದನು" (23:2). ದಾವೀದನ ಜನರು ಈಗ ಆರುನೂರಾಗಿದ್ದರು (1 ಸಮುವೇಲ 23:13), ಆದರೆ ದಾಖಲೆಗಳ ಪ್ರಕಾರ ಅವರು ಇನ್ನೂ ಯುದ್ಧಕ್ಕೆ ಹೋಗಿರಲಿಲ್ಲ. ಕೆಲಿಯಾವು ವೈರಿ ಪಾಳೆಯದ ಹಿಂದುಗಡೆ ಇದ್ದುದರಿಂದ, ಅವರು ಎಲ್ಲಿಗೂ ತಪ್ಪಿಸಿಕೊಂಡು ಓಡಿ ಹೋಗದ ಹಾಗೆ ಸರಳವಾಗಿ ಸುತ್ತುವರಿಯಲ್ಪಡ ಬಹುದಾಗಿತ್ತು. ಆದುದರಿಂದ ಯುದ್ಧಕ್ಕೆ ಹೋಗುವ ವಿಷಯದಲ್ಲಿ "ದಾವೀದನು ಯೆಹೋವನನ್ನು ವಿಚಾರಿಸಿದನು."

"ಯೆಹೋವನನ್ನು ವಿಚಾರಿಸಿದನು" ಎಂಬ ವಾಕ್ಯದ ಮಹತ್ವವನ್ನು ಒತ್ತಿ ಹೇಳುವದಕ್ಕೆ ಒಂದು ಗಳಿಗೆ ಸುಮ್ಮನಿರೋಣ. ಸೌಲನು ಎಲ್ಲಾ ಯಾಜಕರನ್ನು ಕೊಂದ ತರುವಾಯ, ಅಭಿಯಾತಾರನು ರಕ್ಷಣೆಗಾಗಿ ದಾವೀದನ ಬಳಿಗೆ ಓಡಿ ಹೋಗಿದ್ದನೆಂದು ನೆನಪಿಸಿರಿ. ಅಭಿಯಾತಾರನು ಮಹಾಯಾಜಕನ ಮಗನು, ಉಳಿದ ಎಲ್ಲಾ ಯಾಜಕರು ಸತ್ತು ಹೋಗಿದ್ದರಿಂದ, ಅಭಿಯಾತಾರನು ಈಗ ಮಹಾಯಾಜಕನಾಗಿದ್ದನು. ದಾವೀದನು ಯಾಜಕರನ್ನು ರಕ್ಷಿಸುವವನಾದನು, ಅರಸನಾಗುವದಕ್ಕೆ ಇನ್ನೊಂದು ಮಹತ್ವದ ಹೆಜ್ಜೆ.

ಅಭಿಯಾತಾರನು ದಾವೀದನ ಬಳಿಗೆ ಬಂದಾಗ ಏಫೋದನ್ನು ತೆಗೆದುಕೊಂಡು ಬಂದನು (23:6, 8).[32] ಯಾಜಕರ ವಸ್ತ್ರಗಳ ಮೇಲೆ ಧರಿಸುವ ಏಫೋದು ತೋಳಿಲ್ಲದ ಅಂಗಿಯಾಗಿತ್ತು. ಎಲ್ಲಾ ಯಾಜಕರು ಏಫೊದನ್ನು ಧರಿಸುತ್ತಿದ್ದರು (1 ಸಮುವೇಲ 22:18), ಆದರೆ ಒಂದು ಏಫೋದಿತ್ತು, ಅದೇ *ನಿಜವಾದ* ಏಫೋದು ಇದು ಮಹಾಯಾಜಕನು ಧರಿಸುತ್ತಿದ್ದನು. ಅದು ಊರೀಮ್ ಮತ್ತು ತುಮ್ಮೀಮ್ ಎಂಬ ವಸ್ತುಗಳಿಗೆ ಸಂಬಂಧಿಸಿದ್ದು. ಅದು ಮಹಾಯಾಜಕನ ಚೀಲದ ಪದಕದಲ್ಲಿ (ಹತ್ತಿರ ಅಥವಾ ಕೆಳಗೆ) ಇಡಲ್ಪಟ್ಟಿತ್ತು (ವಿಮೋಚನಕಾಂಡ 28:30). ದೈವ ನಿರ್ಣಯವನ್ನು ತಿಳುಕೊಳ್ಳುವದಕ್ಕೆ ಊರೀಮ್ ಮತ್ತು ತುಮ್ಮೀಮ್ ಉಪಯೋಗಿಸಲಾಗುತ್ತಿತ್ತು. ಊರೀಮ್ ಮತ್ತು ತುಮ್ಮೀಮ ಅಂದರೇನು ಮತ್ತು ಅದು ಹೇಗೆ ಕಾಣಿಸುತ್ತದೆ ಎಂದು ನಮಗೆ ತಿಳಿಸಲ್ಪಟ್ಟಿಲ್ಲ. ಬಹುಶಃ ಅವು ವಿಮೋಚನಕಾಂಡ 28 ರಲ್ಲಿ ವಿವರಿಸಲ್ಪಟ್ಟ ಕಲ್ಲುಗಳ ಒಂದು ಭಾಗವಾಗಿರಬಹುದು. ಬಹುಶಃ

ಅವುಗಳು ಎಫೋದಿನ ಚೀಲದಲ್ಲಿ ಇಡಲ್ಪಟ್ಟ ಬೇರೆ ಬೇರೆ ಬಣ್ಣದ ಕಲ್ಲುಗಳಾಗಿರಬಹುದು. ನಾಣ್ಯವನ್ನು ಮೇಲೆ ತೂರುವ ರೀತಿಯಲ್ಲಿ ಅವುಗಳನ್ನು ಉಪಯೋಗಿಸಿರಬಹುದು[33] (ಅದರ ನಿರ್ಣಯವು ಯೆಹೋವನಿಂದಲೇ ನಿರ್ಧರಿಸಲಾಗುತಿತ್ತೇ ಹೊರತು ಅದೃಷ್ಟದಿಂದಲ್ಲ). "ಹೌದು" ಮತ್ತು "ಇಲ್ಲ" ಎಂಬ ಉತ್ತರಗಳನ್ನು ಪಡೆಯಬಹುದಾದ ಪ್ರಶ್ನೆಗಳಿಗೆ ಮಾತ್ರ ಅದನ್ನು ಉಪಯೋಗಿಸಲಾಗುತ್ತಿತ್ತು.

ದಾವೀದನಿಗೆ ದೇವರು ಹೆಚ್ಚಿನ ಆತ್ಮಿಕ ಆಧಾರವನ್ನು ಕೊಟ್ಟಿದ್ದನು: ದಾವೀದನು ಜೊತೆಯಲ್ಲಿ ಈಗ ಮಹಾಯಾಜಕನಿದ್ದನು ಮತ್ತು ಉರೀಮ್ ಮತ್ತು ತುಮ್ಮೀಮ್ ಇರುವ ಎಫೋದ್ ಇತ್ತು! ಆದುದರಿಂದ ದಾವೀದನು "ಯೆಹೋವನಲ್ಲಿ ವಿಚಾರಿಸಿದನು."

"ನಾನು ಹೋಗಿ ಆ ಫಿಲಿಷ್ಟಿಯರನ್ನು ಹೊಡಿಯಬಹುದೋ?" ಎಂಬ ದಾವೀದನ ಪ್ರಶ್ನೆಗೆ ದೇವರ ಉತ್ತರ "ಹೌದು"[34] ಎಂದಿತ್ತು. "ಆಗ ದಾವೀದನು ತನ್ನ ಜನರೊಡನೆ ಕೆಯೀಲಕ್ಕೆ ಹೋಗಿ ಫಿಲಿಷ್ಟಿಯರೊಡನೆ ಯುದ್ಧ ಮಾಡಿ ಅವರನ್ನು ಪೂರ್ಣವಾಗಿ ಸೋಲಿಸಿ ಅವರ ಪಶುಗಳನ್ನು ತೆಗೆದು ಕೊಂಡು ಮತ್ತು ಕೆಯೀಲವದವರನ್ನು ರಕ್ಷಿಸಿದನು" (23:5). ಪಟ್ಟಣವನ್ನು ರಕ್ಷಿಸಿದ ತರುವಾಯ, ದಾವೀದ ಮತ್ತು ಅವನ ಸೇನೆಯು ಕೆಯೀಲದ ಬಳಿ ಬೀಡು ಬಿಟ್ಟರು. ಅಲ್ಲಿನ ನಾಗರೀಕರು ಮೆಚ್ಚುಗೆ ವ್ಯಕ್ತಪಡಿಸಿ, ರಕ್ಷಿಸುವರು ಎಂದು ಅವರು ಅಪೇಕ್ಷಿಸುವದಕ್ಕೆ ಅವರಿಗೆ ಹಕ್ಕಿತ್ತು ಆದರೆ ಸೌಲನು ಬಹುಬೇಗನೆ ಅವರು ಅಲ್ಲಿರುವದನ್ನು ತಿಳಿಕೊಂಡು ಅವರ ಹಿಂದೆ ಬರುವದಕ್ಕೆ ಯೋಜನೆ ಮಾಡತೊಡಗಿದನು. ಆಗ ದಾವೀದನು ಮತ್ತೆ ದೇವರಲ್ಲಿ ವಿಚಾರಿಸಿದನು. ಅವನು ಕೇಳಿದ ಒಂದು ಪ್ರಶ್ನೆಯು, "ಕೆಯೀಲದವರು ನನ್ನನ್ನೂ ನನ್ನ ಜನರನ್ನೂ ಸೌಲನ ಕೈಗೆ ಒಪ್ಪಿಸುವರೋ ಎಂದು ಕೇಳುವಾಗ ಅತನು ಒಪ್ಪಿಸಿಕೊಡುವರು" ಎಂದು ಉತ್ತರಕೊಟ್ಟನು (23:12).

ಇದು ಬಹಳ ವೇದನೆಯುಂಟು ಮಾಡಿತು! ದಾವೀದನಿಂದ ರಕ್ಷಿಸಲ್ಪಟ್ಟ ಪಟ್ಟಣ ಇಲ್ಲಿತ್ತು ಅವರ ಪಟ್ಟಣವು ಭದ್ರವಾಗಿತ್ತು; ಅವರ ಆಹಾರ ಮತ್ತು ಪಷುಗಳು ಅವರ ಬಳಿಯಿತ್ತು; ಅವರ ಕುಟುಂಬವು ಸುರಕ್ಷಿತವಾಗಿತ್ತು - ಆದಾಗ್ಯೂ ಅವರು ತಮ್ಮನ್ನು ಬಿಡುಗಡೆಗೊಳಿಸಿದವರಿಗೆ ದ್ರೋಹ ಮಾಡಲಿಕ್ಕಿದ್ದರು. ಬಹುಶಃ ಅವರು, ಸೌಲನು ನೋಬ ಪಟ್ಟಣವನ್ನು ನಾಶ ಮಾಡಿದ್ದನ್ನು ಕೇಳಿರಬಹುದು ಮತ್ತು ದಾವೀದನ ಪಕ್ಷವಹಿಸಿದರೆ ತಮ್ಮನ್ನು ನಾಶ ಮಾಡಲು ಅವನು ಹಿಂತೆಗೆಯುವದಿಲ್ಲವೆಂದು ಅವರಿಗೆ ತಿಳಿದಿತ್ತು. ಆದರೆ ದಾವೀದನಿಗೆ ಅದು ನುಂಗಲಾರದ ತುತ್ತಾಯಿತು. ಆದರೆ ದಾವೀದನು ತಿರುಗಿ ಬೀಳಲಿಲ್ಲ. "ಆಗ ದಾವೀದನು ತನ್ನ ಸಂಗಡ ಇದ್ದ ಆರುನೂರು ಜನರ ಸಹಿತವಾಗಿ ಕೆಯೀಲಾ ಊರನ್ನು ಬಿಟ್ಟು ಎಲ್ಲೆಲ್ಲಿಯೋ ಅಲೆದಾಡಿನು" (23:13).

ದಾವೀದ ಮತ್ತು ಅವನ ಗುಂಪು ಯೆಹೂದದಲ್ಲಿನ ಜೀಫ್ ಅರಣ್ಯ ಪ್ರಾಂತ್ಯಕ್ಕೆ ಬಂದನು. ಜೀಫ್ಯರು ಯೆಹೂದ ಕುಲಕ್ಕೆ ಸೇರಿದವರು (ಯೆಹೋಶವ 15:55), ದಾವೀದನೂ ಅದೇ ಕುಲಕ್ಕೆ ಸೇರಿದ್ದನು. ಇವರು ಅವನ ಸ್ವಂತ ಜನರೇ! ಇಲ್ಲಿ ಅವನು ಸುರಕ್ಷಿತವಾಗಿರುವೆ ನೆಂದು ತಿಳಿದನು. ಆದರೆ, ಮತ್ತೆ, ತಾನು ಹಾನಿ ಮಾಡದ, ಬಹುಶಃ ರಕ್ಷಿಸಿದ ಜನರಿಂದಲೇ ದಾವೀದನು ದ್ರೋಹ ಮಾಡಲ್ಪಟ್ಟನು.[35] ಜೀಫ್ಯರು ಸೌಲನ ಬಳಿಗೆ ಹೋಗಿ ದಾವೀದನು ಎಲ್ಲಿರುತ್ತಾನೆಂದು ಹೇಳಿದರು (1 ಸಮುವೇಲ 23:19, 20). ದೈವಿಕ ಸಹಾಯದಿಂದ ಮಾತ್ರ ದಾವೀದನು ತಪ್ಪಿಸಿಕೊಂಡನು. ಕೆಲ ಅಧ್ಯಾಯಗಳ ತರುವಾಯ, ಜೀಫ್ಯರು ಮತ್ತೆ ದ್ರೋಹ ಮಾಡಿದರು.[36]

ದ್ರೋಹಕ್ಕೊಳಗಾಗುವದು ದಾವೀದನಿಗೆ ಇದು ಮೊದಲಬಾರಿಯಾಗಿರಲಿಲ್ಲ, ಮತ್ತು ಇದು ಕೊನೆಯ ಬಾರಿಯೂ ಅಲ್ಲ; ಅದು ಎಷ್ಟೇ ಬಾರಿಯಾಗಿರಲಿ ಅದು ವೇದನೆಯನ್ನುಂಟು ಮಾಡುತ್ತದೆ. ನಾನೇನು ಮಾತಾಡುತ್ತಿದ್ದೇನೋ ಬಹುಶಃ ಅದು ನಿಮಗೆ ಅರ್ಥವಾಗುತ್ತದೆ. ನೀವು ನಿಮ್ಮ ವಿಶ್ವಾಸವನ್ನು ಒಬ್ಬರಲ್ಲಿ ಇಡುತ್ತೀರಿ. ನಿಮ್ಮ ಜೀವದಿಂದ ಅವರಲ್ಲಿ ಭರವಸೆಯಿಡುತ್ತೀರಿ.

ಆಗ ಅವರು ನಿಮ್ಮ ವಿಶ್ವಾಸಕ್ಕೆ ದ್ರೋಹ ಬಗೆಯುತ್ತಾರೆ. ಅವರು ನಿಮ್ಮ ಕೈಬಿಡುತ್ತಾರೆ ಮತ್ತು ನೀವು ವೇದನೆಯಿಂದ ಕೂಡಿದವರಾಗುತ್ತೀರಿ.

ನಾವು ಮನುಷ್ಯರ ಮೇಲೆ ಆತುಕೊಳ್ಳಬಾರದು ಬದಲಾಗಿ ಕರ್ತನ ಮೇಲೆ ಅವಲಂಬಿಸಬೇಕು ಎಂದು ಇಂಥ ಸಮಯಗಳು ನಮ್ಮ ಮನಸ್ಸಿನ ಮೇಲೆ ಒತ್ತಿ ಹೇಳುತ್ತವೆ. ಯುದ್ಧದ ಗಾಯದಿಂದಾದ ಕಲೆಗಳಿಂದ ಕೂಡಿದ ಕ್ರೂಜೆಯ ಯೋಧ ಪೌಲನು ಹೇಳುತ್ತಾನೆ, “ನಾನು ಮೊದಲನೆಯ ಸಾರಿ ಪ್ರತಿವಾದ ಮಾಡಿದಾಗ ಯಾರೂ ನನ್ನ ಕಡೆ ಆಗಲಿಲ್ಲ; ಎಲ್ಲರೂ ನನ್ನನ್ನು ಕೈ ಬಿಟ್ಟರು; ... ಆದರೆ *ಕರ್ತನು* ನನ್ನ ಬಳಿಯಲ್ಲಿ ನಿಂತು ನನ್ನನ್ನು ಬಲಪಡಿಸಿದನು ...” (2 ತಿಮೋಥೆ 4:16, 17; ಒತ್ತಿ ಹೇಳಿದ್ದು ನನ್ನದು).

## V. ನಿಮ್ಮನ್ನು ಕೈ ಬಿಡದ ಮಿತ್ರರಿಗಾಗಿ ಕೃತಜ್ಞರಾಗಿರಿ (23:15-18)

23ನೇ ಅಧ್ಯಾಯದ ವಚನ 15 ಮತ್ತು 18, ಮತ್ತು ಉಳಿದ ಅಧ್ಯಾಯಕ್ಕೂ ತೀಕ್ಷಣವಾದ ವಿಭಿನ್ನತೆಯಿದೆ. ಸೌಲನು ದಾವೀದನನ್ನು ಅವನ ಜೀವವನ್ನು ತೆಗೆಯಲು ಹುಚ್ಚನಂತೆ ಹಿಂದಟ್ಟುತ್ತಿರುವಾಗ, ಕೆಯಿಲಾ ಮತ್ತು ಜೀಫದ ಜನರು ದಾವೀದನಿಗೆ ದ್ರೋಹ ಮಾಡಲು ಸಿದ್ಧರಾಗಿರುವಾಗ, ಯೋನಾತಾನನು ಬಂದು ದಾವೀದನಿಗೆ “ದೇವರಲ್ಲಿ ಬಲಪಡಿಸಿದ” ಚಿಕ್ಕ ವಿವರಣೆಯಿದೆ. ಕೇವಲ ಕೆಲವರೇ ಇರಬಹುದು ಮತ್ತು ದೂರವಿರಬಹುದು, ನಿಮ್ಮ ಬಳಿ ನಿಂತುಕೊಳ್ಳುವವರೇ ನಿಮ್ಮ ಮಿತ್ರರು. ಅಂಥ ಮಿತ್ರನು ನಿಮಗಿರುವದಾದರೆ, ಆ ಸ್ನೇಹಿತನಿಗಾಗಿ ದೇವರನ್ನು ಸ್ತುತಿಸಿರಿ.

## VI. ದೇವರು ನಿಮ್ಮನ್ನು ಎಂದಿಗೂ ಕೈ ಬಿಡುವದಿಲ್ಲವೆಂದು ನಂಬಿರಿ (23:14, 25, 26)

ರಾಷ್ಟ್ರದ ಎಲ್ಲಾ ಮೂಲಗಳು ಒಬ್ಬನನ್ನು ನಾಶ ಮಾಡಲು ಉತ್ತೇಜಿಸಲ್ಪಟ್ಟಾಗ ಮತ್ತು ಅವನ ಸುತ್ತಲಿರುವವರು ಅವನಿಗೆ ದ್ರೋಹ ಬಗೆಯಲು ಆತುರರಾಗಿರುವಾಗ, ಅವನು ಹೇಗೆ ತಪ್ಪಿಸಿಕೊಳ್ಳಬಹುದು? ನಾವು 23:14ರಲ್ಲಿ ದಾವೀದನು ಹೇಗೆ ತಪ್ಪಿಸಿಕೊಂಡನೆಂದು ಓದುತ್ತೇವೆ. “ದಾವೀದನು ... ಕಡೆಗೆ ಜೀಫ್ ಅರಣ್ಯ ಪರ್ವತ ಪ್ರಾಂತ್ಯಕ್ಕೆ ಬಂದು ಅಲ್ಲಿ ವಾಸ ಮಾಡಿದನು. ಸೌಲನು ದಿನಂಪ್ರತಿಯೂ ಅವನನ್ನು ಹುಡುಕುತ್ತಿದ್ದರೂ ದೇವರು ಇವನ ಕೈಗೆ ಒಪ್ಪಿಸಲಿಲ್ಲ.” ದಾವೀದನು ಬಹು ಜಾಣ ಮತ್ತು ಎಲ್ಲಾ ಸಹಾಯವಿದ್ದ ಅಲೆಮಾರಿಯಾಗಿದ್ದನೆಂದು ಸೌಲನ ಬಲೆಯಿಂದ ತಪ್ಪಿಸಿಕೊಳ್ಳಲಿಲ್ಲ, ಅಥವಾ ಅವನ ಬಳಿ ಅರುನೂರು ಉತ್ತಮ ತರಬೇತಿ ಪಡೆದ ಜನರು ಅವನನ್ನು ರಕ್ಷಿಸುವದಕ್ಕಿದ್ದರೆಂದು ತಪ್ಪಿಸಿಕೊಳ್ಳಲಿಲ್ಲ. “*ದೇವರು* ಇವನ ಕೈಗೆ ಒಪ್ಪಿಸಲಿಲ್ಲ”! ಎಂದು ದಾವೀದನು ತಪ್ಪಿಸಿಕೊಂಡನು.

ದಾವೀದನ ಜೀವನದ ಈ ಸಮಯವನ್ನು ವಿವರಿಸುವ ಅಧ್ಯಾಯಗಳನ್ನು ಗಮನಿಸಿರಿ ಮತ್ತು ಕರ್ತನು ಅವನ ಸಂಗಡವಿದ್ದನು ಎಂದು ಎಷ್ಟು ಬಾರಿ ಹೇಳುತ್ತದೆ ಎಂದು ನೋಡಿರಿ. (1 ಸಮುವೇಲ 18:12, 14, 28; 23:2, 4; 25:26, 28ff., 34, 39; 26:12, 24; 30:6, 23; ಇತ್ಯಾದಿ). ದಾವೀದನಿಗೆ ಬೇರೆ ಎಲ್ಲಿಯೂ ಹೋಗಲು ಸಾಧ್ಯವಾಗದಿರುವಾಗ, ಅವನು ಯಾವಾಗಲೂ ಕರ್ತನ ಕಡೆಗೆ ತಿರುಗಬಹುದಿತ್ತು. ದಾವೀದನ ಅನೇಕ ಕೀರ್ತನೆಗಳು ಈ ಗಲಿಬಿಲಿಯ ಸಮಯಕ್ಕೆ ಸರಿಹೊಂದುತ್ತದೆ. ಈ ಕೀರ್ತನೆಗಳ ಮೊದಲು ಕೊಡಲ್ಪಟ್ಟಿರುವ ಪರಿಚಯದ ಟಿಪ್ಪಣಿಯನ್ನು ಗಮನಿಸಿರಿ:

ಕೀರ್ತನೆ 59: “ಸೌಲನು ಕಳುಹಿಸಿದವರು ದಾವೀದನ ಜೀವ ತೆಗೆಯಬೇಕೆಂದು ಅವನ ಮನೆಯ ಸುತ್ತಲೂ ಹೊಂಚು ಹಾಕುತ್ತಿದ್ದಾಗ ಅವನು ರಚಿಸಿದ ಕಾವ್ಯ.”

ಕೀರ್ತನೆ 56: "ದಾವೀದನು ಗತ್ ಎಂಬ ಊರಲ್ಲಿ ಫಿಲಿಷ್ಟಿಯರ ಕೈವಶವಾದಾಗ ರಚಿಸಿದ ಕಾವ್ಯ."

ಕೀರ್ತನೆ 34: "ದಾವೀದನು ಅಹೀಮೆಲೆಕನ ಎದುರಿನಲ್ಲಿ ಹುಚ್ಚನಂತೆ ತೋರ್ಪಡಿಸಿಕೊಂಡು ಅವನ ಬಳಿಯಿಂದ ಹೊರಡಿಸಲ್ಪಟ್ಟಾಗ ರಚಿಸಿದ ಕಾವ್ಯ."

ಕೀರ್ತನೆ 57: "ದಾವೀದನು ಸೌಲನ ಭೀತಿಯಿಂದ ಓಡಿಹೋಗಿ ಗುಹೆಯಲ್ಲಿ ಅಡಗಿಕೊಂಡಿದ್ದಾಗ ರಚಿಸಿದ ಕಾವ್ಯ."

ಕೀರ್ತನೆ 142: "ಅವನು ಗುಹೆಯಲ್ಲಿ ಅಡಗಿಕೊಂಡಿದ್ದಾಗ."

ಕೀರ್ತನೆ 52: "ದಾವೀದನು ಅಹೀಮೆಲೆಕನ ಮನೆಗೆ ಬಂದ ವರ್ತಮಾನವನ್ನು ಎದೋಮ್ಯನಾದ ದೋಯೇಗನು ಸೌಲನಿಗೆ ತಿಳಿಸಿದಾಗ ದಾವೀದನು ರಚಿಸಿದ ಪದ್ಯ."

ಕೀರ್ತನೆ 63: "ದಾವೀದನು ಯೆಹೂದ ಸೀಮೆಯ ಅರಣ್ಯದಲ್ಲಿದ್ದಾಗ ರಚಿಸಿದ ಕಾವ್ಯ."

ಕೀರ್ತನೆ 54: "ಜಿಫೆಂಬ ಸ್ಥಳದವರು ಸೌಲನು ಬಳಿಗೆ ಬಂದು ದಾವೀದನು ತಮ್ಮಲ್ಲೇ ಅಡಗಿಕೊಂಡಿದ್ದಾನೆಂದು ತಿಳಿಸಿದಾಗ ದಾವೀದನು ರಚಿಸಿದ ಪದ್ಯ?"

ಮಾನಸಿಕ ಒತ್ತಡದ ಸಮಯದಲ್ಲಿ, ವಿಷಯಗಳನ್ನು ಸರಿಯಾಗಿಡಲು ಕೆಲವರು ದಿನಚರಿಯನ್ನು ಬರೆಯುತ್ತಾರೆ. ದಾವೀದನು ಕಾವ್ಯಗಳನ್ನು ರಚಿಸಿದನು![37] ಕೆಲವು ಸಂದರ್ಭಗಳಲ್ಲಿ ನಮ್ಮಲ್ಲಿ ಅನೇಕರು ನಿರಾಶೆಯಿಂದ ಜಯಿಸಲ್ಪಡುವವು, ದಾವೀದನು ತನ್ನ ಬೀತಿಯನ್ನು ಮಾತ್ರವಲ್ಲದೆ ವಿಶ್ವಾಸವನ್ನು ಸಹಿತ ಮರೆಯಲಾರದ ಪದ್ಯಭಾಗದಲ್ಲಿ ವಿವರಿಸಿದ್ದಾರೆ. ಮೊದಲನೆಯದಾಗಿ ಕೀರ್ತನೆಯಲ್ಲಿ ಈ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ, ದಾವೀದನು ಗಾಬರಿಯಾದ ಪದದಲ್ಲಿ ವಿವರಿಸಿದನು:

> ಇಗೋ, ನನ್ನ ಜೀವಕ್ಕೆ ಹೊಂಚುಹಾಕುತ್ತಾರೆ;
> ಬಲಿಷ್ಟರು ನನಗೆ ವಿರೋಧವಾಗಿ ಗುಂಪುಕೂಡಿದ್ದಾರೆ,
> ಯೆಹೋವನೇ,
> ನಾನು ನಿರ್ದೋಷಿಯೂ ನಿರಪರಾಧಿಯೂ ಅಲ್ಲವೇ!
> ನಿಷ್ಕಾರಣವಾಗಿ ನನ್ನ ಮೇಲೆ
> ಬೀಳಲು ಓಡಿಬಂದು ನಿಂತಿದ್ದಾರೆ (ಕೀರ್ತನೆ 59:3, 4ಎ).

ನಂತರ, ಅವನು ದೇವರಲ್ಲಿ ತನ್ನ ನಂಬಿಕೆಯನ್ನು ಪ್ರಕಟ ಮಾಡಿದನು: "ನನ್ನ ಬಲವೇ, ನಿನ್ನನ್ನು ಹಾಡಿಹರಸುವೆನು. ನನ್ನ ಆಶ್ರಯದುರ್ಗವೂ ಕೃಪಾನಿಧಿಯೂ ದೇವರೇ" (59:17)!

ಈ ಸಮಯಗಳಿಗೆ ಅನ್ವಯಿಸುವ ಹಿಂದಿನ ಕೀರ್ತನೆಯಲ್ಲಿ ದಾವೀದನು ಜೀಫ್ಯರ ದ್ರೋಹದ ಕುರಿತು ದೇವರಿಗೆ ಕೂಗಿಕೊಂಡನು. ದಾವೀದನು ಹೀಗೆ ಹೇಳಿದನು:

> ದೇವರೇ, ನಿನ್ನ ನಾಮಮಹತ್ತಿನಿಂದ ನನ್ನನ್ನು ರಕ್ಷಿಸು;
> ನಿನ್ನ ಪರಾಕ್ರಮದಿಂದ ನನ್ನ ನ್ಯಾಯವನ್ನು ಸ್ಥಾಪಿಸು.
> ದೇವರೇ, ನನ್ನ ಪ್ರಾರ್ಥನೆಯನ್ನು ಲಾಲಿಸು;
> ನನ್ನ ಮಾತುಗಳಿಗೆ ಕಿವಿಗೊಡು.
> ಅನ್ಯರು ನನಗೆ ವಿರೋಧವಾಗಿ ನಿಂತಿದ್ದಾರೆ;
> ಬಲಾತ್ಕಾರಿಗಳು ನನ್ನ ಪ್ರಾಣವನ್ನು ತೆಗೆಯಬೇಕೆಂದಿದ್ದಾರೆ ... (ಕೀರ್ತನೆ 54:1-3).

ದೇವರು ಆ ಪ್ರಾರ್ಥನೆಯನ್ನು ಉತ್ತರಿಸಿದನೋ? 1 ಸಮುವೇಲ 23ರ ಕೊನೆಯನ್ನು ನೋಡಿರಿ. ಜೀಫ್ಯರು ದಾವೀದನನ್ನು ಸೌಲನಿಗೆ ಒಪ್ಪಿಸಿಕೊಡುವದಾಗಿ ಹೇಳಿದ ಮೇಲೆ, ಅರಸನು

ದಾವೀದನು ಮತ್ತೊಮ್ಮೆ ತಪ್ಪಿಸಿಕೊಳ್ಳಬಾರದೆಂದು, ಅವನು ನಿಖರವಾಗಿ ಎಲ್ಲಿದ್ದಾನೆಂದು ಕೇಳಿದನು. ಜೀಫ್ಯರಿಂದ ನಡೆಸಲ್ಪಟ್ಟ ಸೌಲ ಮತ್ತು ಅವನ ಸೇನೆಯು ತಪ್ಪಿಹೋಗದೆ ಸರಿಯಾದ ಸ್ಥಳಕ್ಕೆ ತಲುಪ್ಪಿದರು. ಕೂಡಲೆ ಸೌಲನು ದಾವೀದನ ಜಾಡಿನಲ್ಲಿದ್ದನು: "ಸೌಲನು ಇದನ್ನು ಕೇಳಿ ಮಾವೋನ್ ಅರಣ್ಯಕ್ಕೆ ಬಂದು ಆ ಬೆಟ್ಟದ ಒಂದು ಕಡೆಯಲ್ಲಿ ಹೋಗುತ್ತಿದ್ದನು; ಅದರ ಇನ್ನೊಂದು ಕಡೆಯಲ್ಲಿ ದಾವೀದನೂ ಅವನ ಜನರೂ ಇದ್ದರು. ದಾವೀದನೂ ಅವನ ಜನರೂ ತಪ್ಪಿಸಿಕೊಳ್ಳುವದಕ್ಕೆ ತ್ವರೆಪಡುತ್ತಿರುಷ್ಟರಲ್ಲಿ ಸೌಲನೂ ಅವನ ಜನರೂ ಬಂದು ಅವರನ್ನು ಸುತ್ತುವರಿಯುವದಕ್ಕಿದ್ದರು" (23:26). ಸೌಲನ ಸಾವಿರಾರು ಜನರಿದ್ದ ಸೇನೆಯು ಬೆಟ್ಟವನ್ನು ಎರಡೂ ದಿಕ್ಕಿನಿಂದ ಸುತ್ತುವರಿದರು; ದಾವೀದ ಮತ್ತು ಅವನ ಆರುನೂರು ಜನರು ಮಧ್ಯದಲ್ಲಿ ಸಿಕ್ಕಿ ಕೊಂಡರು. ತಪ್ಪಿಸಿಕೊಳ್ಳಲು ಮಾರ್ಗವೇ ಇಲ್ಲವೆಂದು ತೋರಿತು. ಆಗ ದೇವರು ಮಧ್ಯ ಪ್ರವೇಶಿಸಿದನು. "ಆಗಲೇ ಒಬ್ಬ ದೂತನು ಸೌಲನ ಬಳಿಗೆ ಬಂದು ಅವನಿಗೆ, 'ಬೇಗ ಬಾ; ಫಿಲಿಷ್ಟಿಯರು ದೇಶದೊಳಗೆ ನುಗ್ಗಿದ್ದಾರೆ' ಎಂದು ತಿಳಿಸಿದ್ದರಿಂದ ಅವನು ದಾವೀದನನ್ನು ಹಿಡಿಯುವ ಕೆಲಸದಿಂದ ಹಿಂದಿರುಗಿ ಫಿಲಿಷ್ಟಿಯರಿಗೆ ವಿರೋಧವಾಗಿ ಹೊರಟನು" (23:27, 28ಎ).[38] ಈ ವಚಗಳನ್ನು ವಚನ 14ರ ಹಿನ್ನೆಲೆಯೆಲ್ಲಿ ಓದಿ, "ಅದು ಸುಮ್ಮನೇ ಆಯಿತು" ಅಥವಾ "ದಾವೀದನು ಬಹಳ ಅದೃಷ್ಟವಂತನಲ್ಲವೇ?" ಎಂದು ಹೇಳಲು ಸಾಧ್ಯವಿಲ್ಲ. ದೇವರು ಸಹಾಯ ಮಾಡಿದನೆಂದು ಪ್ರತಿಯೊಬ್ಬನೂ ಅರಿತಿದ್ದನು, ನಂತರ ಅಲ್ಲಿ ಒಂದು ಸ್ಮಾರಕವು ನಿರ್ಮಿಸಲ್ಪಟ್ಟಿತು. "ಆದುದರಿಂದ ಆ ಬೆಟ್ಟಕ್ಕೆ ತಡೆಬೆಟ್ಟ ಎಂದು ಹೆಸರಾಯಿತು" (23:28ಬಿ).

ರಾತ್ರಿ ಎಷ್ಟೇ ಕತ್ತಲಾಗಿರಲಿ, ದೇವರಲ್ಲಿ ಭರವಸೆ ಇಡಿರಿ. ಈ ಅಂಶವನ್ನು ಅರಣ್ಯದಲ್ಲಿ ಪರೀಕ್ಷಿಸಿದ್ದ ದಾವೀದನು ಹೀಗೆ ಬರೆಯುತ್ತಾನೆ, "ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು" (ಕೀರ್ತನೆ 46:1). "ಇಕ್ಕಟ್ಟಿನಲ್ಲಿ" ಎಂಬ ಪದವನ್ನು ಗುರುತಿಸಿರಿ. ನಮ್ಮ ಇಕ್ಕಟ್ಟಿನಲ್ಲಿ ದೇವರು ನಮ್ಮ ಬಳಿ ಇದ್ದಾನೆ; ಅವನು ನಿಮ್ಮ ಕಷ್ಟಗಳಲ್ಲಿ ಇದ್ದಾನೆ. ಈಗ ನಿಮಗೆ ಅದು ತೋರಲಿಕ್ಕಿಲ್ಲ, ಆದರೆ ದೇವರಿಗೆ ಸಮೀಪವಾಗಿರಿ. ಈಗಿನಿಂದ ಐದು ... ಅಥವಾ ಹತ್ತು ... ಅಥವಾ ಇಪ್ಪತ್ತು ವರ್ಷಗಳ ನಂತರ ನೀವು ಹಿಂದೆ ನೋಡಿ ದೇವರ ಹಸ್ತವನ್ನು ಗಮನಿಸಬಹುದು. ದೇವರನ್ನು ಹಿಡಿದುಕೊಳ್ಳಿರಿ; ಅವನು ನಿಮ್ಮನ್ನು ಕೈ ಬಿಡುವದಿಲ್ಲ!

## VII. ದ್ವೇಷದಿಂದ ತುಂಬಿದವರಾಗಬೇಡಿರಿ

ದಾವೀದನ ಕೆಟ್ಟ ಸಮಯದಲ್ಲಿ ಬದುಕಿದ ರೀತಿಯಿಂದ ನಾವು ಅನೇಕ ತತ್ವಗಳನ್ನು ಕಲಿಯಬಹುದು. ನಮ್ಮ ಮುಂದಿನ ಪಾಠದಲ್ಲಿ, ನಾವು ಅಧ್ಯಾಯ 24ರಿಂದ ಮತ್ತು 26ರವರೆಗೆ ದಾವೀದನು ಪ್ರತಿಕಾರವನ್ನು ಹೇಗೆ ಎದುರಿಸಿದನು ಎಂದು ಕಲಿಯೋಣ. ಕೆಟ್ಟ ಸಮಯಗಳ ಒಂದು ಅಪಾಯವೆಂದರೆ ನಮ್ಮ ಹೃದಯವು ದ್ವೇಷದಿಂದ ತುಂಬುವ ಸಾಧ್ಯತೆ ಇದೆ. ನಮ್ಮ ಹೃದಯದಲ್ಲಿ ದ್ವೇಷವೆಂಬ ಬೇರು ಬೆಳೆಯದಂತೆ ನಾವು ನೋಡಿಕೊಳ್ಳುವದು ಬಹು ಪ್ರಾಮುಖ್ಯವಾಗಿದೆ (ಇಬ್ರಿಯ 12:15).

## VIII. ಕ್ಷಮಿಸುವವರಾಗಿರಿ

ದ್ವೇಷದಿಂದ ತಪ್ಪಿಸಿಕೊಳ್ಳಬೇಕಾದರೆ, ಕ್ಷಮೆಯನ್ನು ಕಲಿತುಕೊಳ್ಳಿರಿ. ನಮ್ಮ ಮುಂದಿನ ಪಾಠದ ಸವಾಲು, "ಹೃದಯವು ಪ್ರತಿಕಾರಕ್ಕಾಗಿ ಕೂಗುವಾಗ." ಇದನ್ನು ಸಂಕ್ಷಿಪ್ತವಾಗಿ, "ಎಲ್ಲಾ ದ್ವೇಷವನ್ನು ... ನಿಮ್ಮಿಂದ ದೂರ ಮಾಡಿರಿ ... ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ" (ಎಫೆಸ 4:31, 32).

## IX. ಯಾವದೂ ಶಾಶ್ವತವೆಂದು ತಿಳುಕೊಳ್ಳಬೇಡಿರಿ

ಯಾವದೂ, ಒಳ್ಳೆಯ ಅಥವಾ ಕೆಟ್ಟ ಸಮಯವಿರಬಹುದು, ಶಾಶ್ವತವಲ್ಲವೆಂದು ತಿಳುಕೊಳ್ಳುವದು ನಮಗೆ ಸಹಾಯಕವಾಗುತ್ತದೆ. ನಮ್ಮ ಮುಂದಿನ ಟ್ರುತ್ ಫಾರ್ ಟುಡೆ ಸಂಚಿಕೆಯಲ್ಲಿ, ದಾವೀದನು ಹತ್ತು ವರ್ಷಗಳ ಪಲಾಯನದ ತರುವಾಯ ಹೇಗೆ ಅರಸನಾದನು ಎಂದು ನೋಡೋಣ. ಸ್ವಲ್ಪ ತಡೆಯಿರಿ; ಕೆಟ್ಟ ಸಮಯಗಳು ನಿರಂತರವಾಗಿರುವದಿಲ್ಲ. ನಾವು ಈ ಅಂಶ ಮತ್ತು ಇತರ ಅಂಶಗಳ ಮೇಲೆ ಆಲೋಚಿಸಬಹುದು - ಆದರೆ ಕೆಟ್ಟ ಸಮಯದಲ್ಲಿ ಬದುಕುವುದರ ಬಗ್ಗೆ ಒಂದು ಕ್ಷಣ ಒಂದು ಕೊನೆಯ ಸೂಚನೆಯಿಂದ ಮುಕ್ತಾಯ ಗೊಳಿಸೋಣ:

## X. ಕೆಟ್ಟ ಸಮಯಗಳಿಂದ ಒಳ್ಳೆಯದು ಬರಬಹುದೆಂದು ಅರ್ಥಮಾಡಿಕೊಳ್ಳಿರಿ

ರೋಮಾಪುರ 8:28 ಎಂದಿಗೂ ಮರೆಯಬೇಡಿರಿ; ಗಟ್ಟಿಯಾಗಿ ಹಿಡಿದುಕೊಳ್ಳಿರಿ: “ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ.” ದೇವರು ದಾವೀದನ ಜೀವನದಲ್ಲಿನ ಕತ್ತಲೆಯ ಸಮಯದಲ್ಲಿ ಏನು ಮಾಡುತ್ತಿದ್ದನು ಎಂದು ಲಕ್ಷಿಸಿರಿ. ದೇವರು ದಾವೀದನನ್ನು ರೂಪಿಸುತ್ತಾ, ಅರಸನನ್ನಾಗುವದಕ್ಕೆ ಸಿದ್ಧಗೊಳಿಸುತ್ತಿದ್ದನು. ಕುರಿಗಳನ್ನು ಕಾಯುವದು ಪದವಿಪೂರ್ವ ತರಬೇತಿಯಾಗಿತ್ತು. ಅವನ ಜೀವಕ್ಕಾಗಿ ಪಲಾಯನ ಮಾಡುವದು ಪದವಿ ತರಬೇತಿಯಾಗಿದೆ.

ದೇವರ ಯೋಜನೆಗಳು ಮತ್ತು ಉದ್ದೇಶಗಳೆಲ್ಲವನ್ನು ನಾವು ತಿಳಿಯುವದು ಸಾಧ್ಯವಿಲ್ಲ (ಯೇಶಾಯ 55:8, 9), ಆದರೆ ದಾವೀದನು ಅವಲಂಭಿಸಿದ (ಅವನು ಆತುಕೊಂಡ ಎಲ್ಲಾ “ಊರುಗೋಲು”) ಎಲ್ಲ ಸಂಗತಿಗಳನ್ನು ದೇವರು ಅವನಿಂದ ತೆಗೆದು ಕೇವಲ *ತನ್ನೊಬ್ಬನ* ಮೇಲೆ ಮಾತ್ರ ಆತುಕೊಳ್ಳಬೇಕೆಂದು ಕಲಿಸಿದನು. ದಾವೀದನು, ತನ್ನ ಮನೆಯನ್ನು ಮತ್ತು ಮೀಕಲಳ ಪ್ರೀತಿಯನ್ನು; ಸಮುವೇಲನನ್ನು ಕೊನೆಯ ಬಾರಿ ಭೇಟಿಯಾದದ್ದನ್ನು; ತನ್ನ ಮಿತ್ರ ಯೋನಾತಾನನಿಂದ ದುಃಖದಿಂದ ಅಗಲಿದ್ದನ್ನು; ದೇವದರ್ಶನ ಗುಡಾರದಿಂದ ಬೇರೆ ಯಾದದ್ದನ್ನು, ನೋಡಿದ್ದೇವೆ. ನಾವು ಅವನ ದುಃಖದ ಕೂಗನ್ನು ಕೇಳಿದ್ದೇವೆ (ಕೀರ್ತನೆ 142: “ನನ್ನ ಪ್ರಾಣಕ್ಕೆ ಹಿತಚಿಂತಕರು ಯಾರೂ ಇಲ್ಲ” (ವಚನ 4).

ಆದರೆ ಕೀರ್ತನೆ 142ರ ಮುಂದಿನ ವಚನಗಳನ್ನು ನೋಡಿರಿ. ವಚನ 5ರಲ್ಲಿ ದಾವೀದನು “ನೀನೇ ನನ್ನ ಶರಣನೂ ಜೀವಲೋಕದಲ್ಲಿ ನನ್ನ ಪಾಲೂ ಆಗಿದ್ದಿ ಎಂದು ಕೂಗಿ ಮೊರೆ ಯಿಟ್ಟಿದ್ದೇನೆ” ಎಂದನು (ಒತ್ತಿ ಹೇಳಿದ್ದು ನನ್ನದು). ದಾವೀದನು ತನ್ನ ಬಲಕೊಡುವ ಇತರ ಮೂಲಗಳನ್ನು ಕಳಕೊಂಡಿರಬಹುದು, ಆದರೆ ಅವನ ಬಳಿ ಇನ್ನೂ ಅವನ ದೇವರಿದ್ದನು ಮತ್ತು ತನ್ನ ಸ್ವರವನ್ನು ಅವನ ಮುಂದೆ ಎತ್ತಿದನು: “ನನ್ನ ಕೂಗನ್ನು ಲಾಲಿಸು, ಬದಲು ಕುಗ್ಗಿ ಹೋಗಿ ದ್ದೇನೆ. ಹಿಂಸಕರ ಕೈಯಿಂದ ನನ್ನನ್ನು ತಪ್ಪಿಸು; ಅವರು ನನಗಿಂತ ಬಲಿಷ್ಠರಾಗಿದ್ದಾರಲ್ಲಾ. ಸೆರೆ ಯಿಂದ ನನ್ನನ್ನು ಬಿಡಿಸು; ನಿನ್ನ ನಾಮವನ್ನು ಕೀರ್ತಿಸುವೆನು” (ವಚನಗಳು 6, 7ಎ).

ದಾವೀದನು ಈ ದೃಢವಾದ ಮಾತುಗಳಿಂದ ಕೀರ್ತನೆಯನ್ನು ಮುಕ್ತಾಯಗೊಳಿಸಿದನು: ನೀತಿವಂತರು *ನಿನ್ನ* ಮಹೋಪಕಾರಕ್ಕಾಗಿ ನನ್ನನ್ನು *ಸುತ್ತಿಕೊಂಡು* ಉತ್ಸಾಹಗೊಳ್ಳುವರು (7ಬಿ; ಒತ್ತಿ ಹೇಳಿದ್ದು ನನ್ನದು). ವಚನ 4 (“ನನ್ನ ಪ್ರಾಣಕ್ಕೆ ಹಿತಚಿಂತಕರು ಒಬ್ಬರೂ ಇಲ್ಲ”) ಮತ್ತು ವಚನ 7 (“ನೀತಿವಂತರು ನನ್ನನ್ನು ಸುತ್ತಿಕೊಳ್ಳುವರು”) ಈ ಎರಡೂ ವಚನಗಳು ಈ ಭಾಗದಲ್ಲಿ ಕೇವಲ ಎರಡೇ ವಚನಗಳಿಂದ ಬೇರ್ಪಟ್ಟಿವೆ, ಆದರೆ ಭಾವನೆಗಳಲ್ಲಿ ಅವು ಮಿಲ್ಯನ್‌ಗಟ್ಟಳೆ ಮೈಲು ಅಂತರದಲ್ಲಿವೆ. ತನ್ನ ದೇವರಲ್ಲಿ ಭರವಸೆ ಇಡುವದರ ಹೊಸ ಮಟ್ಟವನ್ನು ದಾವೀದನು ಏರಿದನು!

ಈ ಪಾಠಗಳು ನಮಗೆ ಬಹು ಪ್ರಾಮುಖ್ಯವಾದ ಪಾಠಗಳಾಗಿವೆ - ಮತ್ತು ನಾವು ಕೆಲವೊಮ್ಮೆ ಇಷ್ಟು ಕಠಿಣರಾಗುತ್ತೇವೆಂದರೆ, ಆಪತ್ತು ನಮ್ಮನ್ನು ತಟ್ಟಿದಾಗ ಮಾತ್ರ ನಾವು ಅವುಗಳನ್ನು ಕಲಿಯುತ್ತೇವೆ. ನಮ್ಮನ್ನು ಇನ್ನೊಬ್ಬರು ತಪ್ಪಾಗಿ ನಡೆಸಿಕೊಂಡಾಗಲೇ ನಾವು

ಕರುಣೆಯುಳ್ಳವರೂ ಮತ್ತು ಕ್ಷಮಿಸುವವರೂ ಆಗಿರುವದಕ್ಕೆ ಕಲಿಯುತ್ತೇವೆ. ನಮಗೆ ಪ್ರೀಯವಾದದ್ದನ್ನು ಕಳಕೊಂಡಾಗಲೇ ನಾವು ದೇವರ ಮೇಲೆ ಸಂಪೂರ್ಣವಾಗಿ ಭರವಸೆ ಇಡುವದನ್ನು ಕಲಿಯುತ್ತೇವೆ. ಲೋಕದ ಮನುಷ್ಯನು ಎಲ್ಲವನ್ನು ಕಳಕೊಂಡಾಗ, ಅವನು, "ನಾನು ಸರ್ವನಾಶವಾ ಗುತ್ತೇನೆ" ಎಂದು ಹೇಳುತ್ತಾನೆ. ಒಬ್ಬ ಕ್ರೈಸ್ತನು ಎಲ್ಲವನ್ನು ಕಳಕೊಂಡಾಗ, ಅವನು ದೇವರ ಕಡೆಗೆ ನೋಡುತ್ತಾನೆ, ಮತ್ತು ದೇವರು, "ನಿನ್ನ ಕೈ ಬರಿದಾಗಿದೆಯೋ? ಒಳ್ಳೇಯದು! ಕಡೇಗೂ ನೀನು ನನ್ನ ಅದ್ಭುತವಾದ ಆಶೀರ್ವಾದಗಳನ್ನು ಸ್ವೀಕರಿಸುವದಕ್ಕೆ ಸಿದ್ಧನಾಗಿದ್ದಿ!" ಎಂದು ಹೇಳುತ್ತಾನೆ.

ನಾವು ಕೆಟ್ಟ ಸಮಯಗಳನ್ನು ಬಯಸಬೇಕು ಮತ್ತು ಎದುರು ನೋಡ ಬೇಕು ಎಂದು ನಾನು ಹೇಳುತ್ತಿಲ್ಲ. ನಾನು ಹೇಳುವದು ಕೇವಲ, ಅವುಗಳು ಬರುವಾಗ, ಅವುಗಳ ಕಡೆಗಿನ ನಮ್ಮ ಭಾವನೆಯು ಬಹುದೊಡ್ಡ ವ್ಯತ್ಯಾಸವನ್ನು ಮಾಡುತ್ತದೆ. ನಾವು ಅಂಥ ಸಮಯಗಳಿಂದ ಹೊರಬರುವಾಗ, ಒಂದೇ ದ್ವೇಷವುಳ್ಳವರಾಗಿ ಅಥವಾ ಉತ್ತಮರಾಗಿ, ಮುರಿದವರಾಗಿ ಅಥವಾ ರೂಪಿಸಲ್ಪಟ್ಟವರಾಗಿ ಹೊರಬರುತ್ತೇವೆ. ಕೆಟ್ಟ ಸಮಯಗಳು ಬರುವಾಗ ಸಕಾರಾತ್ಮಕ ಭಾವನೆಯನ್ನು ಇಟ್ಟುಕೊಳ್ಳುವದಕ್ಕೆ ಪ್ರಯತ್ನಿಸೋಣ, ಯಾಕೆಂದರೆ ಅದರಿಂದ *ಒಳ್ಳೆದು* ಬರಬಹುದು.

## ಮುಕ್ತಾಯ

ನೀವು ಯಾರೇ ಆಗಿರಬಹುದು ಅದು ಯಾವ ವ್ಯತ್ಯಾಸ ಮಾಡುವದಿಲ್ಲ; ಕೆಟ್ಟ ಸಮಯಗಳು ಬರುತ್ತವೆ. ನೆನಪುಗಳು ಪ್ರವಾಹದಂತೆ ಬರುತ್ತವೆ: ತನ್ನ ಕುರ್ಚಿಯ ಮೇಲೆ ಕುಳಿತು ತನ್ನ ದಾಂಪತ್ಯ ಜೀವನದಲ್ಲಿನ ಗಂಭೀರವಾದ ಕಷ್ಟಗಳಿಗಾಗಿ ಅಳುತ್ತಿರುವ ಒಬ್ಬ ಹಿರಿಯರು; ಅವರ ಇನ್ನೂ ಮದುವೆಯಾಗದ ಮಗಳು ಗರ್ಭಿಣಿಯಾಗಿದ್ದಳೆಂದು ಅತ್ತು ಕಣ್ಣು ಕೆಂಪಾಗಿಸಿಕೊಂಡಿರುವ ತಂದೆತಾಯಂದಿರು; ಪಾಲಕರು, ಅಜ್ಜ ಅಜ್ಜಿ, ಮಿತ್ರರು ಆಸ್ಪತ್ರೆಯ ಚಿಕ್ಕ ಕೋಣೆಯಲ್ಲಿ ಸೇರಿಕೊಂಡು, ಈಜುಕೊಳದಲ್ಲಿ ಬಿದ್ದ ಮಗುವಿನ ಪರಿಸ್ಥಿತಿಯ ಕುರಿತು ಸುದ್ದಿಗಾಗಿ ಕಾಯುತ್ತಿರುವದು; ಬಹುಶಃ ತನ್ನ ಮಗನು ಒಬ್ಬ ಸಲಿಂಗಕಾಮಿ ಎಂದು ದುಃಖದಿಂದ ನನಗೆ ಹೇಳುವ ಒಬ್ಬ ದೈವಭಕ್ತ ತಾಯಿ. ನಿಮ್ಮಲ್ಲಿ ಬಹು ಜನರು ಕೆಟ್ಟ ಸಮಯಗಳಲ್ಲಿ ಈಗ ಹೋಗುತ್ತಿರಬಹುದು. ಒಂದು ವೇಳೆ ಹಾಗಿದ್ದರೆ, ದಾವೀದನ ಅರಣ್ಯದ ಅನುಭವದಿಂದ ನಾವು ಕಲಿಯುವ ಪಾಠ: ನಾವು ನಮ್ಮ ಉತ್ತಮವಾದದ್ದನ್ನೂ ಮಾಡಿ, ದೇವರ ಮೇಲೆ ಆತುಕೊಂಡರೆ, ನಾವು ಬದುಕಬಹುದು. ದಾವೀದನು ಮಾಡಿದನು; ನಾವೂ ಮಾಡಬಹುದು.

---

ಟಿಪ್ಪಣಿಗಳು

[1]ಧರ್ಮೋಪದೇಶಕಾಂಡ 32:30; ಕೀರ್ತನೆ 91:7; ಮೀಕ 6:7. ಗಮನಿಸಿರಿ. ಒಬ್ಬ ತಾಯಿಯು, "ನಾನು ನಿನಗೆ ಸಾವಿರ ಬಾರಿ ಹೇಳಿದ್ದೇನೆ" ಮತ್ತು "ನಾನು ನಿನಗೆ ಒಂದು ಮಿಲ್ಯನ್ ಬಾರಿ ಹೇಳಿದ್ದೇನೆ" ಎಂದು ಹೇಳಿದರೆ ಅವಳು ಎರಡೂ ಬಾರಿ ಒಂದೇ ಸಂಗತಿಯನ್ನು ಹೇಳುತ್ತಿದ್ದಾಳೆ. [2]ಬಹುಶಃ ಅದು ದಾವೀದನನ್ನು ಪ್ರಚೋದಿಸುವ ತಂತ್ರವಾಗಿರಬಹುದು, ಆಗ ಸೌಲನಿಗೆ ಅವನನ್ನು ಕೊಲ್ಲಲು ಒಂದು ನೆವ ದೊರಕುತ್ತಿತ್ತು. ಆದರೆ ಅದು ಹಾಗೆ ಆಗಲಿಲ್ಲ. [3]ಸೌಲನು ನೂರು ಸುನ್ನತಿಯಾಗದ ಫಿಲಿಷ್ಟಿಯ ಪುರುಷರ "ಮುಂದೊಗಲನ್ನು" ಕೇಳಿದನು (1 ಸಮುವೇಲ 18:25). [4]1 ಸಮುವೇಲ 19:12, 18; 20:1; 21:10; ಇತ್ಯಾದಿ. ಮುಂದಿನ ಕೆಲವು ಅಧ್ಯಾಯಗಳಲ್ಲಿ ಹತ್ತು ಹಾರಿ ದಾವೀದನು ಓಡಿಹೋದನು ಎಂದು ಹೇಳಲ್ಪಟ್ಟಿದೆ (ಒಂದು ಇಲ್ಲವೇ ಇನ್ನೊಂದು ರೀತಿಯಲ್ಲಿ). [5]ಮೀಕಲಳು ಅದರ ಕುರಿತು ಹೇಗೋ ಕಂಡುಕೊಂಡಳು; ಬಹುಶಃ ದಾವೀದನ ಮೂಲಕವಾ ಗಿರಬಹುದು (1 ಸಮುವೇಲ 19:11). [6]ಅವರ ಮನೆಯನ್ನು ಗಮನಿಸಲಾಗುತ್ತಿತ್ತು (1 ಸಮುವೇಲ 19:11). [7]ಅವರ ಮನೆಯು ಪಟ್ಟಣದ ಗೋಡೆಯ ಮೇಲೆ ಕಟ್ಟಲ್ಪಟ್ಟಿತ್ತೆಂದು ಇದು ಸೂಚಿಸುತ್ತದೆ (ಯೆಹೋಶುವ 2:15). [8]ಇಬ್ರಿಯ.: *teraphim.* ಇದು ಒಂದು ವಿಗ್ರಹವನ್ನು ಸೂಚಿಸುತ್ತದೆ, ಮತ್ತು NASBಯಲ್ಲಿ ಭಾಷಾಂತರಿಸಲಾಗಿದೆ. ದಾವೀದನ ಮನೆಯಲ್ಲಿ ವಿಗ್ರಹವು ಏನು ಮಾಡುತ್ತಿತ್ತು? ವಾಕ್ಯ ಭಾಗವು ಅದರ ಕುರಿತು ಏನೂ ಹೇಳುವದಿಲ್ಲ,

ಆದುದರಿಂದ ನಾವು ತತ್ವವಾದಿಗಳಾಗ ಬಾರದು, ಆದರೆ ಮೀಕಲಳು ಬಹುಶಃ ಅದನ್ನು ತನ್ನ ತಂದೆಯ ಮನೆಯಿಂದ ತಂದಿರಬಹುದು. ಮತ್ತು ದಾವೀದನಿಗೆ ಅದು ಅಲ್ಲಿದೆ ಎಂದು ತಿಳಿದಿರಲಿಕ್ಕಿಲ್ಲ. ಪುರಾತನ ವಿಗ್ರಹಗಳ ನಿಜವಾಗಿಯೂ ವಿಗ್ರಹಗಳಂತೆ *ಕಾಣಲಿಕ್ಕಿಲ್ಲ*; ಒಂದು ಕೋಣೆಯ ಮೂಲೆಯಲ್ಲಿ ನಿಲ್ಲಿಸಲಾದ ಅಲಂಕೃವಾದ ಕಂಬವಿರಬಹುದು. [9]"ನಾಯೋತ್" ಅಂದರೆ "ವಸತಿ" ಅಥವಾ "ನೆಲೆ." ಇಲ್ಲಿ ಅದು ಪ್ರವಾದಿಗಳು ವಾಸಿಸುತ್ತಿದ್ದ ಮನೆಗಳ ಗುಂಪಿರಬಹುದು. [10]"ಬೆತ್ತಲೆ" ಅಂದರೆ "ಬಟ್ಟೆಯಿಲ್ಲದವನಾಗಿ" ಮತ್ತು "ಸಾಕಷ್ಟು ಬಟ್ಟೆಯಿಲ್ಲದವನಾಗಿ" ಎಂದು ಅರ್ಥ ಕೊಡಬಹುದು. ಸೌಲನು ಸ್ಥಿತಿ ಏನಿತ್ತೆಂದು ನಮಗೆ ಗೊತ್ತಿಲ್ಲ. ಬರ್ಟನ್ ಕೊಫ್‌ಮನ್ ಗಮನಿಸುವ ಪ್ರಕಾರ, ಹೇಗಿದ್ದರೂ, ಸೌಲನಿಗೆ ಎಚ್ಚರವಾದಾಗ, ಅವನು ದಾವೀದನಿಗಿದ್ದ ತನ್ನ ಬಟ್ಟೆಗಳನ್ನು ಹುಡುಕುವದರಲ್ಲಿ ಹೆಚ್ಚು ಆಸಕ್ತನಾಗಿದ್ದನು.

[11]ಅಹೀಮೆಲೆಕನು ಏಲಿಯ ಸಂತತಿಯವನು. ಅವನು, ಸಮುವೇಲನು ಸೌಲನನ್ನು ಬಿಟ್ಟು ಹೋದ ನಂತರ ಸೌಲನ ಆತ್ಮಿಕ ಸಲಹೆಗಾರನಾಗಿದ್ದ ಅಹೀಯನ ಸಹೋದರನೂ ಅಲ್ಲ (ಹೋಲಿಸು 1 ಸಮುವೇಲ 14:3; 22:9) ಅಥವಾ ಅಹೀಯನೂ ಅಲ್ಲ (ಅಂದರೆ, ಅಹೀಮೆಲೆಕನ ಇನ್ನೊಂದು ಹೆಸರು ಅಹೀಯ). ಹೇಗಿದ್ದರೂ ದಾವೀದನು ಅವನನ್ನು ನಂಬಲು ಸಾಧ್ಯವಿರಲಿಲ್ಲ. [12]ಪ್ರತಿ ಸಬ್ಬತ ದಿನದಲ್ಲಿ ಹನ್ನೆರಡು ದೊಡ್ಡ ಹುಳಿಯಿಲ್ಲದ ರೊಟ್ಟಿಗಳು ಗುಡಾರದ ಮೇಜಿನ ಮೇಲೆ ಇಡಲ್ಪಡುತ್ತಿದ್ದವು (ವಿಮೋಚನಕಾಂಡ 25:23-30; ಯಾಜಕಕಾಂಡ 24:5-9). ಮುಂದಿನ ಸಬ್ಬತ್ತಿನಲ್ಲಿ ಹೊಸ ರೊಟ್ಟಿಗಳನ್ನು ಇಡುವಾಗ ಯಾಜಕರ ಹಳೇ ರೊಟ್ಟಿಗಳನ್ನು ತಿನ್ನುತ್ತಿದ್ದರು. ದಾವೀದ ನಿಗೆ ಯಾಜಕನು ಹಳೇ ರೊಟ್ಟಿಯನ್ನು ಕೊಟ್ಟನು. ಒಳ್ಳೆದನ್ನು ಮಾಡುತ್ತಾ ಜೀವವನ್ನು ಉಳಿಸುವದು ಯಾವಾಗಲೂ ನ್ಯಾಯಯುತವಾಗಿದೆ ಎಂದು ಯೇಸು, ಈ ಕತೆಯನ್ನು ಉಪಯೋಗಿಸಿದನು (ಮತ್ತಾಯ 12:3, 4; ಲೂಕ 6:9). ಇಂದು ಅದರ ಅನ್ವಯವನ್ನು ಆಲೋಚಿಸಿರಿ: ಒಬ್ಬನು ಆರಾಧನೆಗೆ ಹೋಗುತ್ತಿದ್ದರೆ (ಇಬ್ರಿಯ 10:25ರಲ್ಲಿ ಆಜ್ಞಾಪಿಸಿದಂತೆ) ಮತ್ತು ಒಂದು ಅಪಘಾತವನ್ನು ಎದುರಾದರೆ, ಅವನು ಆರಾಧನೆಗೆ ತೆರಳು ವದನ್ನು ಬಿಟ್ಟು, ಅಲ್ಲಿ ನಿಂತುಕೊಂಡು ಗಾಯಾಳುಗಳಿಗೆ ಸಹಾಯ ಮಾಡುವದು ನ್ಯಾಯಯುತವಾಗಿದೆ. "ಒಳ್ಳೆದಾಗಲಿ ಎಂದು ಕೆಟ್ಟದ್ದನ್ನು ಮಾಡುವದಕ್ಕೆ" ಇದು ಪರವಾ ನಿಗೆ ಎಂದು, ನಾವು ತಿಳುಕೊಳ್ಳಬಾರದು. [13]ದಾವೀದನ ಮೋಸ ಮತ್ತು ಇತರ ಮೂರ್ಖತನವನ್ನು ಸಾಧಿಸುವದು ಅವಶ್ಯವಿಲ್ಲವೆಂದು ತಿಳಿದುಕೊಳ್ಳಿರಿ. ಸತ್ಯವೇದವು ತಾನು ಒಪ್ಪದ ಅನೇಕ ಸಂಗತಿಗಳ ನಿಜಾಂಶವನ್ನು ಕೊಡುತ್ತದೆ. ದೇವರು ಸುಳ್ಳು ಹೇಳುವದನ್ನು ಒಪ್ಪುವದಿಲ್ಲ (1 ಯೋಹಾನ 2:21; ಯೋಹಾನ 8:44). [14]ದೋಯೇಗನು "ಯೆಹೋವನ ಆಲಯದಲ್ಲಿ ತಡೆಯಲ್ಪಟ್ಟಿದನು" ಎಂದು ವಾಕ್ಯ ಭಾಗವು ಹೇಳುತ್ತದೆ (1 ಸಮುವೇಲ 21:7). ಇದು ಯಾವದೋ ಶಿಸ್ತಿನ ಕಾರ್ಯವಾಗಿರ ಬಹುದು - ಯಾಜಕರ ವಿರುದ್ಧ ದೋಯೇಗನಿಗಿದ್ದ ಕೋಪವನ್ನು ಅದು ವಿವರಿಸಲು ಸಹಾಯವಾಗುತ್ತದೆ. [15]ದಾವೀದನು "ಗತ್ ಊರಿನ ಅರಸನಾದ ಆಕೀಷನ ಬಳಿಗೆ ಹೋದನು" (1 ಸಮುವೇಲ 21:10) ಮತ್ತು ಅವನ "ಮನೆಯೊಳಗೆ ಬರಲು" ಬಯಸಿದನು (1 ಸಮುವೇಲ 21:15). ಬಹುಶಃ 1 ಸಮುವೇಲ 27:1 ಈ ಬಾರಿ ಅವನ ಒಳ ನೋಟವನ್ನು ಕೊಡುತ್ತದೆ. [16]1 ಸಮುವೇಲ 21:11, ದಾವೀದನನ್ನು ಅವರು "ಪ್ರಾಂತ್ಯದ ಅರಸನೆಂದು" ಕರೆದರು. ಆ ಪ್ರದೇಶದ ಜನರ ಹೃದಯವನ್ನು ಆಳುವವನು ಎಂದು ಅವರು ಅರ್ಥೈಸಿರಬಹುದು. ಇಂದು ಜನರು ರಾಕ್ ಆಂಡ್ ರೋಲ್ ನ ಅರಸನು ಎಂದು ಮಾತಾಡುತ್ತಾರೆ - ಅಂದರೆ, ಆ ಬಲವನ್ನು ಆಳುವವನು ಎಂದರ್ಥ. [17]ಕೀರ್ತನೆ 56ರ ಪರಿಚಯವನ್ನು ನೋಡಿರಿ. [18]ಅಮೇರಿಕೆಯ ಪಶ್ಚಿಮದಲ್ಲಿ ಒಂದಕ್ಕಿಂತಲೂ ಹೆಚ್ಚು ಪ್ರವಾಸಿಗರು, ಇಂಡಿಯನ್‌ರಿಂದ ಹುಚ್ಚರಂತೆ ನಟಿಸಿ ತಪ್ಪಿಸಿಕೊಂಡಿದ್ದಾರೆ. [19]ಕೀರ್ತನೆ 34ರ ಪ್ರಾರಂಭದ ಮಾತುಗಳನ್ನು ಓದಿರಿ, ನಂತರ ಆ ಕೀರ್ತನೆಯ ಸಂದೇಶ. [20]ಕೆಲವು ಭಾಷಾಂತರದ ಪ್ರಕಾರ "ಅವನು ಬಾಗವನ್ನು ಪರಚಯಿಸಿದನು" ಎಂದಿದೆ. ಅಥವಾ ದಾವೀದನು ಕತ್ತಿಯನ್ನು ಉಪಯೋಗಿಸಿ ಗುರುತು ಮಾಡಿರಬಹುದು.

[21]1 ಸಮುವೇಲ 22:1 "ಅದುಲ್ಲಾಮ" ಅಂದರೆ "ಆಶ್ರಯ." [22]ಅದುಲ್ಲಾಮಿನ ಮೂಲ ಸ್ಥಳದ ಕುರಿತು ಪಂಡಿತರು ವಿಭಿನ್ನ ವಿಚಾರ ಮಂಡಿಸುತ್ತಾರೆ. ಇಲ್ಲ ವಿವರಿಸಲ್ಪಟ್ಟಿರುವದು ಹಳೆಯ ಸ್ಥಳ. [23]Lynn Anderson, "Man On the Run" (N.P., n.d.), sound cassette. [24]ತಾನು ಪಲಾಯನ ಮಾಡುವ ಸಮಯದಲ್ಲಿ, ತನ್ನ ತಂದೆ ತಾಯಿಗಳು ಸುರಕ್ಷಿತವಾಗಿರ ಬೇಕೆಂದು ದಾವೀದನು ಅವರನ್ನು ಮೋವಾಬಿಗೆ ಕರಕೊಂಡು ಹೋದನು (1 ಸಮುವೇಲ 22:3, 4). ಕುಟುಂಬವು ಮೋವಾಬಿನೊಂದಿಗೆ ಸಂಬಂಧವಿಟ್ಟುಕೊಂಡಿತ್ತು; ದಾವೀದನ ಮುತ್ತಜ್ಜಿಯು ಮೋ ವಾಬ್ಯಳಾಗಿದ್ದಳು. ಮತ್ತು ಸೌಲನು ಮೋವಾಬಿನ ಕುರಿತು ಎಚ್ಚರಿಸಿದ್ದನು (1 ಸಮುವೇಲ 4:47), ಅದು ಮೋವಾಬಿನ ಅರಸನು ಸೌಲನ ವೈರಿಯನ್ನು ಪ್ರೀತಿಯಿಂದ ಕಾಣಬಹುದಾಗಿತ್ತು. [25]"ಭದ್ರವಾದ ನೆಲೆ" ಎಂಬ ಪದವು ದಾವೀದನ ಪಲಾಯನದ ಕತೆಯಲ್ಲಿ ಬಹಳ ಸಾರಿ ಉಪಯೋಗಿಸಲಾಗಿದೆ. ಅದು ಒಂದೇ ಸ್ಥಳದ ಕುರಿತು ಹೇಳಿಲ್ಲ,

ಆದರೆ ಸರಳವಾದ ಸಿಕ್ಕಲಾಗದ ಅಥವಾ ಸರಳವಾಗಿ ರಕ್ಷಿಸಲ್ಪಡುವ ಯಾವದೇ ಸ್ಥಳವಾಗಿರಬಹುದು. ಈ ವಚನದಲ್ಲಿ ಅದು ಗವಿಯನ್ನು ಸೂಚಿಸುತ್ತದೆ. [26]1 ಸಮುವೇಲ 21:1-9, ದಾವೀದನು ದೇವರಲ್ಲಿ ವಿಚಾರಿಸಿದನು ಎಂದು ನಮೂದಿಸುವದಿಲ್ಲ, ಆದರೆ ಅವನು ಹಾಗೆ ಮಾಡಿರಬಹುದು (ನೋಡಿರಿ 22:15). [27]1 ಸಮುವೇಲ 22:18, 19 ಈ ದುರಂತಗಳನ್ನು ಮೊದಲೇ ಹೇಳಲಾಗಿತ್ತು 1 ಸಮುವೇಲ 2:31. [28]ಉಳಿದವರು ಸೌಲನ ಕರೆಯನ್ನು ಉತ್ತರಿಸುವಾಗ ಬಹುಶಃ ಅವನು ನೋಬದಲ್ಲೇ ಉಳಿದುಕೊಂಡು "ಮನೆಯನ್ನು ನೋಡಿಕೊಳ್ಳುತ್ತಿದ್ದನು." [29]ಅವನು ನಮ್ಮನ್ನು ಕ್ಷಮಿಸಲಿ ಕ್ಷಮಿಸದೇ ಇರಲಿ, ನಾವು ಮಾಡಬೇಕಾದದ್ದನ್ನು ಮಾಡಿರುತ್ತೇವೆ (ರೋಮಪುರ 12:18). [30]ಫಿಲಿಷ್ಟಿಯರು "ತುಳಿಯುವ ಕಣವನ್ನು ಸೂರೆ ಮಾಡುತ್ತಿದ್ದರು"; ಅದರ ಉದ್ದೇಶ ಬಹುಶಃ ಆಹಾರವನ್ನು ಕಳುವು ಮಾಡುವದಾಗಿರಬಹುದು.

[31]1 ಸಮುವೇಲ 23:3 ಗಮನಿಸಿರಿ, ಅವರು ಯಹೂದವನ್ನು ಬಿಟ್ಟು ಕೇಯಿಲಕ್ಕೆ ತೆರಳ ಬೇಕಾಗಿರಬಹುದು. [32]ದಾವೀದನು ಕೇಯಿಲಕ್ಕೆ ಬರದ ಹೊರತು ಅಬಿಯಾತಾರನು ದಾವೀದನ ಬಳಿಗೆ ಮೊದಲು ಬರಲಿಲ್ಲವೆಂದು ಹೇಳಲು ಕೆಲವರು 1 ಸಮುವೇಲ 23:6ನ್ನು ಉಪಯೋಗಿಸುತ್ತಾರೆ. ಆದರ 'ದಾವೀದನ ಸೇನೆಯು ಕೆಯೀಲವನ್ನು ಗೆದ್ದುಕೊಳ್ಳಲು ಯುದ್ಧ ಮಾಡುವಾಗ ಅಬಿಯಾತಾರನು ಬಹುಶಃ ಹಿಂದೆ ಉಳಿದುಕೊಂಡನೆಂದು ವಚನ 6 ಹೇಳುತ್ತವೆ. ದಾವೀದನು ಅದನ್ನು ಸಾಧಿಸುವ ತನಕ ಅವನೊಂದಿಗೆ ಒಂದಾಗಲಿಲ್ಲ. ವಚನ 2ರಲ್ಲಿ ದಾವೀದನು "ಯೆಹೋವನಲ್ಲಿ ವಿಚಾರಿಸಿದನು" ಎಂಬದರ ಸಹಜ ಅರ್ಥವು ವಚನ 9ರಲ್ಲಿ ಅವನು ಮಾಡಿದ ತರವೇ ಇತ್ತು. [33]ಬಹುಶಃ ಬಣ್ಣವೊಂದನ್ನು ಹೊರತು ಪಡಿಸಿ, ಊರೀಮ್ ಮತ್ತು ತುಮ್ಮೀಮ್ ಒಂದೇ ರೀತಿ ಯಾಗಿದ್ದವು - ಒಂದು ಕಲ್ಲು "ಹೌದು" ಎಂಬುದನ್ನು ಸೂಚಿಸುವದಕ್ಕೆ ಮತ್ತು ಇನ್ನೊಂದು "ಇಲ್ಲ" ಬಹುಶಃ ಪ್ರಶ್ನೆಯನ್ನು ಕೇಳಿದ ತರುವಾಯ, ಮಹಾಯಾಜಕನು ಒಳಗೆ ಕೈ ಹಾಕಿ ಒಂದು ಕಲ್ಲನ್ನು ಹೊರಗೆ ತೆಗೆದು, ಉತ್ತರವನ್ನು ಹೀಗೆ ಕೊಡುತ್ತಿದ್ದನು. ಊರೀಮ್ ಮತ್ತು ತುಮ್ಮೀಮ್ ಚಪ್ಪಟೆಯಾಗಿತ್ತು ಮತ್ತು ಪ್ರತಿ ಕಲ್ಲು ಒಂದು ಬದಿಯಲ್ಲಿ ಒಂದು ಬಣ್ಣ ಮತ್ತೊಂದು ಬದಿಯಲ್ಲಿ ಇನ್ನೊಂದು ಬಣ್ಣ ಹೊಂದಿತ್ತು. ಅದನ್ನು ಗಾಳಿಯಲ್ಲಿ ಮೇಲೆ ತೂರಲಾಗುತ್ತಿತ್ತು. ಅದು ಬಿದ್ದ ಮೇಲೆ, ಎರಡೂ ಬದಿಗಳು ಒಂದೇ ಬಣ್ಣವನ್ನು ತೋರಿಸಿದರೆ, ಅದು ನಿಸ್ಸಂದೇಹವಾಗಿ "ಹೌದು" ಎಂದರ್ಥ, ಎರಡೂ ಬದಿಗಳೂ ಇನ್ನೊಂದು ಬಣ್ಣ ತೋರಿಸಿದರೆ, ಅದು "ಇಲ್ಲ" ಎಂದರ್ಥ; ಎರಡೂ ಬಣ್ಣಗಳು ಕಾಣುತ್ತಿದ್ದರೆ ಅದು ಖಚಿತವಾಗಿರಲಿಲ್ಲ. ಒಂದು ಯಹೂದ್ಯ ಪದ್ಧತಿಯ ಪ್ರಕಾರ, ಅವು *ಹೊಳೆಯುವದರ* ಮೂಲಕ ದೇವರ ಚಿತ್ತವನ್ನು ಸೂಚಿಸುತ್ತಿದ್ದವು. [34]ಅವನ ಜನರ ಭಯದಿಂದಾಗಿ, ದಾವೀದನು ಈ ಪ್ರಶ್ನೆಯನ್ನು ಎರಡು ಬಾರಿ ಕೇಳಿ ಅವರಿಗೆ ಭರವಸೆ ನೀಡಿದನು. ಎರಡು ಬಾರಿ ದೇವರು ಅವನಿಗೆ ಹೋಗಲು ಹೇಳಿದನು. [35]ಬಹುಶಃ ದಾವೀದ ಮತ್ತು ಅವನ ಜನರು ಸಂರಕ್ಷಿಸಿದ ಆಸ್ತಿಯ ಒಡೆಯರು ಕೃತಜ್ಞತೆಯುಳ್ಳ ವರಾಗಿ ಕೊಡುವ ಬಹುಮಾನಗಳ ಮೇಲೆ ಜೀವಿಸುತ್ತಿದ್ದರು (1 ಸಮುವೇಲ 25:14-16). [36]ದಾವೀದನಿಗೆ ಜೀಫ್ಯರಿಂದಾದ ಎರಡನೇಯ ದ್ರೋಹದ ಕುರಿತು 1 ಸಮುವೇಲ 26ರಲ್ಲಿದೆ. [37]ದಾವೀದನು ತನ್ನ ಕವನಗಳನ್ನು ಒಂದೇ ಬಾರಿ ಬರೆದನೋ ಅಥವಾ ತನ್ನ ಮನಸ್ಸಿನಲ್ಲಿ ಅವುಗಳನ್ನು ರಚಿಸಿ ನಂತರ ಬರೆದನೋ ನಮಗೆ ಗೊತ್ತಿಲ್ಲ. [38]ಫಿಲಿಷ್ಟಿಯರ ದಾಳಿಯ (1 ಸಮುವೇಲ 23:1). ಕುರಿತು ಹಿಂದೆ ಸೌಲನಿಗೆ ಅಷ್ಟು ಆಸಕ್ತಿಯಿಲ್ಲದ್ದರಿಂದ, ಇದು ಬಹುಶಃ ಸೌಲನ ಒಡೆತನದಲ್ಲಿದ್ದ ಆಸ್ತಿಯ ಮೇಲಿನ ದಾಳಿಯಾಗಿರಬಹುದು!